ಸಂಪುಟ 01 । ಸಂಚಿಕೆ 94 । ಗುರುವಾರ 19 ಫೆಬ್ರವರಿ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಮಾನವಶಾಸ್ತ್ರ ದಿನ**

ಪ್ರತಿ ವರ್ಷ ಫೆಬ್ರವರಿ ಮೂರನೇ ಗುರುವಾರ, ವಿಶ್ವ ಮಾನವಶಾಸ್ತ್ರ ದಿನವನ್ನು ಆಚರಿಸಲಾಗುತ್ತದೆ. ಮತ್ತು ಈ ವರ್ಷ ಫೆಬ್ರವರಿ 19 ರಂದು ಇದು ಆಚರಿಸಲ್ಪಡುತ್ತದೆ. ಈ ದಿನವನ್ನು ಇನ್ನೂ ಬಳಸದ ಪ್ರದೇಶವನ್ನು ಗೌರವಿಸಲು ಮತ್ತು ಮಾನವಶಾಸ್ತ್ರದ ಬಗ್ಗೆ ಸಾರ್ವಜನಿಕರಿಗೆ ಶಿಕ್ಷಣ ನೀಡಲು ಗೊತ್ತುಪಡಿಸಲಾಗಿದೆ. ಆದಾಗ್ಯೂ, ವಿಶ್ವ ಮಾನವಶಾಸ್ತ್ರ ದಿನದ ಇತಿಹಾಸ ಮತ್ತು ಮಹತ್ವಕ್ಕೆ ಹೋಗುವ ಮೊದಲು ಮಾನವಶಾಸ್ತ್ರವನ್ನು ಮೊದಲು ವ್ಯಾಖ್ಯಾನಿಸೋಣ.

**2) ರಾಮಕೃಷ್ಣ ಪರಮಹಂಸ ಜಯಂತಿ**

ರಾಮಕೃಷ್ಣ ಪರಮಹಂಸ ಜಯಂತಿಯನ್ನು ಪ್ರತಿವರ್ಷ ಹಿಂದೂ ಚಂದ್ರನ ಕ್ಯಾಲೆಂಡರ್ ಪ್ರಕಾರ ಫಾಲ್ಗುಣ ಮಾಸದ ಶುಕ್ಲ ಪಕ್ಷದ ದ್ವಿತೀಯ ತಿಥಿಯಂದು ಆಚರಿಸಲಾಗುತ್ತದೆ (ಸಾಮಾನ್ಯವಾಗಿ ಫೆಬ್ರವರಿ ಅಥವಾ ಮಾರ್ಚ್). 19ನೇ ಶತಮಾನದ ಶ್ರೇಷ್ಠ ಆಧ್ಯಾತ್ಮಿಕ ನಾಯಕ, ಕಾಳಿ ಭಕ್ತ ಮತ್ತು ಸ್ವಾಮಿ ವಿವೇಕಾನಂದರ ಗುರುವಾಗಿದ್ದ ಇವರು, 1836ರ ಫೆಬ್ರವರಿ 18ರಂದು ಪಶ್ಚಿಮ ಬಂಗಾಳದ ಕಮರ್ಪುಕುರ್‌ನಲ್ಲಿ ಜನಿಸಿದರು. ಈ ದಿನವು ಸರ್ವಧರ್ಮ ಸಮನ್ವಯ ಮತ್ತು ಭಕ್ತಿಯ ಸಂಕೇತವಾಗಿದೆ.

**3) ಛತ್ರಪತಿ ಶಿವಾಜಿ ಜಯಂತಿ**

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಪ್ರತಿ ವರ್ಷ ಫೆಬ್ರವರಿ 19 ರಂದು, ಮರಾಠ ಸಾಮ್ರಾಜ್ಯದ ಸ್ಥಾಪಕ ಶಿವಾಜಿ ಮಹಾರಾಜರ ಜನ್ಮದಿನದ ಅಂಗವಾಗಿ ಅತ್ಯಂತ ಸಂಭ್ರಮದಿಂದ ಆಚರಿಸಲಾಗುತ್ತದೆ. 1630 ರಲ್ಲಿ ಜನಿಸಿದ ಶಿವಾಜಿ ಮಹಾರಾಜರ ಶೌರ್ಯ, ಆಡಳಿತ ಕೌಶಲ್ಯ ಮತ್ತು 'ಹಿಂದವಿ ಸ್ವರಾಜ್ಯ'ದ ಕಲ್ಪನೆಯನ್ನು ಸ್ಮರಿಸುತ್ತಾ, ಮಹಾರಾಷ್ಟ್ರ ಸೇರಿದಂತೆ ಭಾರತದಾದ್ಯಂತ ಸಾಂಸ್ಕೃತಿಕ ಕಾರ್ಯಕ್ರಮಗಳು, (ಮೆರವಣಿಗೆ)ಗಳನ್ನು ಆಯೋಜಿಸಲಾಗುತ್ತದೆ

## ಸುಭಾಷಿತ

ಸಾವಿರಾರು ಜನರನ್ನು ಗೆಲ್ಲುವವನು ವೀರನಲ್ಲ !
ಮನಸ್ಸನ್ನು ಗೆಲ್ಲುವವನು ವೀರ !!
–ಗೌತಮ ಬುದ್ಧ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮುಷ್ಕರಕ್ಕೆ ಮುಂದಾದ ಸಾರಿಗೆ ನೌಕರರ ವಿರುದ್ಧ ಎಸ್ಮಾ ಜಾರಿಗೆ ಚಿಂತನೆ..!

**ಬೆಂಗಳೂರು: ಸರ್ಕಾರದ ನಿಯಮ ಉಲ್ಲಂಘಿಸಿ ತಮ ಬೇಡಿಕೆಗಳ ಈಡೇರಿಕೆಗಾಗಿ ಕರ್ತವ್ಯಕ್ಕೆ ಹಾಜರಾಗದೇ ಮುಷ್ಕರದಲ್ಲಿ ಪಾಲ್ಗೊಳ್ಳುವ ಸಾರಿಗೆ ನೌಕರರ ವಿರುದ್ಧ ಅಗತ್ಯ ಸೇವಾ ನಿರ್ವಹಣಾ ಕಾಯ್ದೆ (ಎಸಾ) ಜಾರಿ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ.**

ನಾಳೆ ನಡೆಯಲಿರುವ ಸಾರಿಗೆ ಇಲಾಖೆ ನೌಕರರ ಮುಷ್ಕರದಲ್ಲಿ ಪಾಲ್ಗೊಳ್ಳುವವರಿಗೆ ನೋ ವರ್ಕ್, ನೋ ಪೇ (ಕೆಲಸಕ್ಕೆ ಬಾರದಿದ್ದರೆ ವೇತನವಿಲ್ಲ) ಜಾರಿ ಮಾಡಲಾಗಿದ್ದು, ಭಾಗವಹಿಸದಂತೆ ಇಲಾಖೆ ತನ್ನ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಸೂಚನೆ ಕೊಟ್ಟಿದೆ. ಇದರ ಹೊರತಾಗಿಯೂ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಈಶಾನ್ಯ ಕರ್ನಾಟಕ ಮತ್ತು ವಾಯುವ್ಯ ಕರ್ನಾಟಕ ಸೇರಿದಂತೆ ಸಾರಿಗೆ ಇಲಾಖೆಯ ನಾಲ್ಕು ನಿಗಮಗಳ ನೌಕರರು ಮುಷ್ಕರದಲ್ಲಿ ಪಾಲ್ಗೊಂಡರೆ ಎಸಾ ಜಾರಿ ಮಾಡುವ ಬಗ್ಗೆ ಇಲಾಖೆಯಲ್ಲಿ ಚಿಂತನೆ ನಡೆದಿದೆ ಎಂದು ಗೊತ್ತಾಗಿದೆ.

ಏಕಾಏಕಿ ನೌಕರರ ವಿರುದ್ಧ ಎಸಾ ಜಾರಿ ಮಾಡಿದರೆ ನ್ಯಾಯಾಲಯದಲ್ಲಿ ಹಿನ್ನಡೆಯಾಗಬಹುದೆಂಬ ಹಿನ್ನಲೆಯಲ್ಲಿ ಎಚ್ಚರಿಕೆ ಹೆಜ್ಜೆ ಇಡುತ್ತಿರುವ ಸಾರಿಗೆ ಇಲಾಖೆ ಮೊದಲು ಮನವೊಲಿಸುವ ಪ್ರಯತ್ನ ನಡೆಸಲಿದೆ.ಅಷ್ಟಕ್ಕೂ ಜಗ್ಗದಿದ್ದರೆ ಸಿಬ್ಬಂದಿಗಳಿಗೆ ನೋ ವರ್ಕ್, ನೋ ಪೇ ನೋಟಿಸ್ ಜಾರಿ ಮಾಡುವುದು ಇಲ್ಲದಿದ್ದರೆ ಅಮಾನತು ಕೊನೆಗೆ ಎಸಾ ಹಾಕುವ ಬಗ್ಗೆಯೂ ಸಾರಿಗೆ ಅಧಿಕಾರಿಗಳು ಚರ್ಚೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಈ ಹಿಂದೆಯೂ ಸಾರಿಗೆ ನೌಕರರಿಗೆ ಮುಷ್ಕರದಲ್ಲಿ ಪಾಲ್ಗೊಳ್ಳದಂತೆ ಎಚ್ಚರಿಕೆ ನೀಡಲಾಗಿತ್ತು. ಆದ–'ರೂ ಕೆಲವು ನೌಕರರು ನಿಯಮ ಮೀರಿ ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ಕೆಲವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿತ್ತು.



ಮುಷ್ಕರ ಏಕೆ : ತಮ ಬಹುದಿನಗಳ ಬೇಡಿಕೆಯನ್ನು ಈಡೇ–ರಿಸಬೇಕೆಂದು ಒತ್ತಾಯಿಸಿ ಸಾರಿಗೆ ನೌಕರರು ನಾಳೆ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಬೆಂಗಳೂರು ಚಲೋ ನಡೆಸುತ್ತಿದ್ದಾರೆ.ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಬೆಂಗಳೂರು ಚಲೋ ನಡೆಯುತ್ತಿದ್ದು, ಫೆ.20 ರಿಂದ ಬೇಡಿಕೆ ಈಡೇರುವವರೆಗೂ ಮುಷ್ಕರ ನಡೆಸುವ ಆಲೋಚನೆಯಲ್ಲಿ ನೌಕರರಿದ್ದಾರೆ. 2020–2023 ಮೂರು ವರ್ಷ 2 ತಿಂಗಳು 38 ತಿಂಗಳ ಹಿಂಬಾಕಿ ಹಣ ಪಾವತಿಸಬೇಕು. 2024ರ ಜನವರಿ 1ಕ್ಕೆ ಅನ್ವಯವಾಗುವಂತೆ ವೇತನವನ್ನ ಪರಿಷ್ಕರಣೆ ಮಾಡುವಂತೆ ಜಂಟಿ ಕ್ರಿಯಾ ಸಮಿತಿ ಬೇಡಿಕೆ ಮುಂದಿಟ್ಟಿದೆ. ಆದ–'ರೆ ನೌಕರರ ಬೇಡಿಕೆಗೆ ಸರ್ಕಾರ ಒಪ್ಪುತ್ತಿಲ್ಲ.

2024ರ ಬದಲು 2026ರ ಜನವರಿ 1ಕ್ಕೆ ಅನ್ವಯವಾಗುವಂತೆ ವೇತನವನ್ನು ಪರಿಷ್ಕರಣೆ ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತಿದ್ದು, 38 ತಿಂಗಳ ಬದಲು 18/20 ತಿಂಗಳ ಹಿಂಬಾಕಿ ಕೊಡುತ್ತೇವೆ ಎಂದಿದೆ. ಆದರೆ ಇದಕ್ಕೆ ಜಂಟಿ ಕ್ರಿಯಾ ಸಮಿತಿ ಒಪ್ಪದೇ ಪ್ರತಿಭಟನೆಯ ಹಾದಿ ಹಿಡಿದಿದೆ. ನೌಕರರ ಬೇಡಿಕೆಗೆ ಸರ್ಕಾರ ಒಪ್ಪುತ್ತಿಲ್ಲ. 2024ರ ಬದಲು 2026ರ ಜನವರಿ 1ಕ್ಕೆ ಅನ್ವಯವಾಗುವಂತೆ ವೇತನವನ್ನು ಪರಿಷ್ಕರಣೆ ಮಾಡುತ್ತೇವೆ ಎಂದು ಸರ್ಕಾರ ಹೇಳುತ್ತಿದೆ. 38 ತಿಂಗಳ ಬದಲು 18/20 ತಿಂಗಳ ಹಿಂಬಾಕಿ ಕೊಡುತ್ತೇವೆ ಎಂದಿದೆ. ಆದರೆ ಇದಕ್ಕೆ ಜಂಟಿ ಕ್ರಿಯಾ ಸಮಿತಿ ಒಪ್ಪದೇ ಪ್ರತಿಭಟನೆಯ ಹಾದಿ ಹಿಡಿದಿದೆ.

ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿಯಿಂದ ಬೆಂಗಳೂರು ಚಲೋಗೆ ಕರೆ ನೀಡಲಾಗಿದೆ. ಸಾರಿಗೆ ನೌಕರರ ಜಂಟಿ ಕ್ರಿಯಾ ಸಮಿತಿ ಕರಪತ್ರ ಹಂಚಲಿದೆ. ನಾವು ಏಕೆ ಪ್ರತಿಭಟನೆ ಹಾದಿ ಹಿಡಿದಿದ್ದೇವೆ? ನಮ ಬೇಡಿಕೆ ಏನು? ಎಂದು ಸಾರ್ವಜನಿಕರಿಗೆ ಮನವರಿಕೆ ಮಾಡಲು ಜಂಟಿ ಕ್ರಿಯಾ ಸಮಿತಿ ಮುಂದಾಗಿದ್ದು, ಬಸ್ ನಿಲ್ದಾಣದಲ್ಲಿ ಕರ ಪತ್ರ ಹಂಚಿದೆ. ಈ ಹಿಂದೆ ಮುಷ್ಕರ ಮಾಡಿದಾಗ ಜನಾಕ್ರೋಶ ಸ್ಫೋಟವಾಗಿತ್ತು.

ಮುಷ್ಕರ ಹೂಡಿದವರ ವಿರುದ್ಧವೇ ಪ್ರಯಾಣಿಕರು ಅಸಮಾಧಾನ ಹೊರಹಾಕಿದ್ದರು. ಇದೇ ಕಾರಣಕ್ಕೆ ಹೋರಾಟದ ವಿಚಾರವನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಲು ನೌಕರರ ಸಂಘ ನಿರ್ಧರಿಸಿದೆ. ಫೆ.20ರಿಂದ ಮುಷ್ಕರಕ್ಕೆ ಮುಂದಾಗಲಿದೆ. ಬೆಂಗಳೂರು ಚಲೋದಲ್ಲಿ ಭಾಗಿಯಾಗದಂತೆ ನೌಕರರಿಗೆ ಸಾರಿಗೆ ಇಲಾಖೆ ಎಚ್ಚರಿಕೆ ನೀಡಿದ್ದು, ಸಂಸ್ಥೆ ವೇತನ ಕಡಿತ ಆದೇಶ ಹೊರಡಿಸಿದೆ. ನಾಳೆ ಬೆಂಗಳೂರು ಚಲೋಗೆ ಸಾರಿಗೆ ನೌಕರರು ತಯಾರಿ ನಡೆಸುತ್ತಿರುವ ಹೊತ್ತಲ್ಲೇ ಸಾರಿಗೆ ನೌಕರರಿಗೆ ಸಾರಿಗೆ ಇಲಾಖೆಯಿಂದ ಖಡಕ್ ಎಚ್ಚರಿಕೆ ನೀಡಿದೆ.

# ಲಿಂಗಪೂಜೆಯಿಂದ ಅಗಾಧವಾದ ಶಕ್ತಿ: ನಾವದಗಿ ಶ್ರೀ



**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಸಮಾಜದಲ್ಲಿ ಆಧ್ಯಾತ್ಮಿಕ ಕ್ರಾಂತಿಯನ್ನು ತಂದಂತಹ ಎಲ್ಲ ಶರಣರು ಲಿಂಗ ಪೂಜೆ ಮೂಲಕ ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡಿದ್ದಾರೆ. ಲಿಂಗ ಪೂಜೆಯಲ್ಲಿ ಅಗಾಧವಾದ ಶಕ್ತಿ ಇದೆ ಎಂದು ನಾವದಗಿ ಬ್ರಹನ್ಮಠದ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರು ಹೇಳಿದರು.**

ತಾಲೂಕಿನ ನಾವದಗಿ ಗ್ರಾಮದ ಬ್ರಹನ್ಮಠದ ಪೂಜ್ಯರ ದ್ವಿತೀಯ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡ ಗುಡ್ಡಾಪುರದ ದಾನಮ್ಮ ದೇವಿಯ 8ನೇ ದಿನದ ಪುರಾಣದಲ್ಲಿ ಸಾಮೂಹಿಕ ಲಿಂಗ ಪೂಜೆ ಸಂಸ್ಕಾರ ಕೊಡುವ ವಿಶೇಷ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಲಿಂಗ ಪೂಜೆಯು ಶಿವನನ್ನು ಆರಾಧಿಸುವ ಒಂದು ಪವಿತ್ರ ಆಚರಣೆಯಾಗಿದೆ. ಅದು ನಮ್ಮಲ್ಲಿ ಏಕಾಗ್ರತೆ, ಶಾಂತಿ ಮತ್ತು ಅಧ್ಯಾತ್ಮಿಕ ಜಾಗೃತಿಯನ್ನು ಹೆಚ್ಚಿಸುತ್ತದೆ. ಮಹಾ ಸಾಧ್ವಿ ಶ್ರೀ ಹೇಮರೆಡ್ಡಿ ಮಲ್ಲಮ್ಮ, ಕಲಬುರ್ಗಿಯ ಶ್ರೀ ಶರಣಬಸಪ್ಪ ಹಾಗೂ ಕಡಕೋಳ ಮಡಿವಾಳೇಶ್ವರರು ಲಿಂಗ ಪೂಜೆಯ ಮೂಲಕವೇ ಭಗವಂತನ ಸಾಕ್ಷಾತ್ಕಾರ ಪಡೆದುಕೊಂಡಿದ್ದಾರೆ.


ನಾವು ಕೂಡ ಲಿಂಗ ಪೂಜೆಯನ್ನು ಮಾಡುವುದರ ಮೂಲಕ ಈ ಶರಣ–ರ ಮಾರ್ಗದಲ್ಲಿ ನಡೆಯಬೇಕಾಗಿದೆ ಎಂದರು. ಸಾಹಿತಿ ಬಸವರಾಜ ಗೊರಜಿ ಪ್ರಾಸ್ತಾವಿಕವಾಗಿ ಮಾತನಾಡಿ ನಾವದಗಿ ಶ್ರೀಗಳು ಈ ಭಾಗದ ಭಕ್ತರನ್ನು ಸಂಸ್ಕರಿಸಲು ಹಗಲಿರುಳು ಶ್ರಮಿಸುತ್ತಿದ್ದಾರೆ. ನಾವೆಲ್ಲರೂ ಸೇರಿಕೊಂಡು ಅವರ ಗುರು ಪಟ್ಟಾಧಿಕಾರದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದೇವೆ ಇದೇ ರೀತಿಯಾಗಿ ಇದರ ದ್ವಿತೀಯ ವಾರ್ಷಿಕೋತ್ಸವವನ್ನೂ ತನು ಮನ ಧನದೊಂದಿಗೆ ಯಶಸ್ವಿಗೊಳಿಸಲು ಪ್ರಯತ್ನಿಸೋಣ ಎಂದರು. ವೇ.ಮೂ.ರಾಚಯ್ಯ ಹಿರೇಮಠ ಲಿಂಗ ಪೂಜೆಯ ಮಂತ್ರಗಳನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಶ್ರೀಮಠದ ನೂರಾರು ಭಕ್ತರು ಉಪಸ್ಥಿತರಿದ್ದರು.

# ತಹಶಿಲ್ದಾರ ಕುಮಾರಿ ಸತ್ಯಮ್ಮ ದೇವರಭೂಪುರ ಶಾಲೆಗೆ ಭೇಟಿ :ಶಾಲಾ ಕಟ್ಟಡದ ಗುಣಮಟ್ಟ ಕಾಯ್ದುಕೊಳ್ಳುವಂತೆ ಸೂಚನೆ

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಸರಕಾರಿ ಶಾಲಾ ಕಟ್ಟಗಳು ಸುಸಜ್ಜಿತವಾಗಿದ್ದರೆ ಮಾತ್ರ ಮಕ್ಕಳು ಯಾವುದೇ ಅಡ್ಡಿ ಆತಂಕಗಳು ಇಲ್ಲದೆ ಶಿಕ್ಷಣ ಕಲಿಯಬಹುದು. ಪೋಷಕರೂ ಸಹ ನಿರ್ಭೀತಿಯಿಂದ ಸರಕಾರಿ ಶಾಲೆಗೆ ಮಕ್ಕಳನ್ನು ಕಳುಹಿಸುತ್ತಾರೆ.**

ಹೀಗಾಗಿ ತಾಲ್ಲೂಕಿನ ದೇವರಭೂಪುರ ಶಾಲಾ ಆವರಣದಲ್ಲಿ ಕೆ.ಕೆ.ಆರ್.ಡಿ.ಬಿ. ಅನುದಾನದಲ್ಲಿ ನಿರ್ಮಿಸಲಾಗುತ್ತಿರುವ ನೂತನ ಶಾಲಾ ಕಟ್ಟಡದ ವೀಕ್ಷಿಸಿದ ತಹಶಿಲ್ದಾರ ಕು.ಸತ್ಯಮ್ಮ ಕಟ್ಟಡದ ಗುಣಮಟ್ಟದ ವಿಚಾರದಲ್ಲಿ ದೂರು ಕೇಳಿಬಂದ ಹಿನ್ನಲೆಯಲ್ಲಿ ಸಂಬಂಧಪಟ್ಟ ಅಧಿಕಾ–



ರಿಗಳೊಂದಿಗೆ ದೂರವಾಣಿ ಸಂಪರ್ಕದ ಮೂಲಕ ಮಾತನಾಡಿದ ಅವರು ಕಟ್ಟಡದ ಗುಣಮಟ್ಟದ ವಿಚಾರದಲ್ಲಿ ರಾಜೀ ಆಗಬಾರದು ಎಂದು ತಾಕೀತು ಮಾಡಿದರು.

ಅದಲ್ಲದೇ ಈ ವಿಚಾರವಾಗಿ ಡಿಸಿಯವರಿಗೆ ಪತ್ರ ಬರೆಯಲಾಗುವುದು ಎಂದು ಎಚ್ಚರಿಕೆ ನೀಡಿದರು. ಮೊದಲ ಬಾರಿಗೆ ಶಾಲೆಗೆ ಆಗಮಿಸಿದ ತಹಶಿಲ್ದಾರ ಅವರನ್ನ ಶಾಲಾ ಮುಖ್ಯ ಶಿಕ್ಷಕ ದವಲಸಾಬ ಗೋನವಾಟ್ಲ, ಹಾಗೂ ಸಹ ಶಿಕ್ಷಕರು ಗೌರವಿಸಿದರು. ಈ ಸಂದರ್ಭದಲ್ಲಿ ದೇವರಭೂಪುರ ಗ್ರಾಮದ ಗುರು ಹಿರಿಯರು ಉಪಸ್ಥಿತರಿದ್ದರು.

# ಮೌಲಾನಾ ಯಾಸೀನರಿಗೆ ದ್ವಿಚಕ್ರ ವಾಹನ ವಿತರಣೆ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಫೌಂಡೇಶನ್(ರಿ) ಇದರ 9 ನೇ ವಾರ್ಷಿಕೋತ್ಸವದ ಪ್ರಯುಕ್ತ ಹಮ್ಮಿಕೊಂಡ ವಿವಿಧ ಕ್ಷೇತ್ರಗಳ ಸಾಧಕ–ರಿಗೆ ಸನ್ಮಾನ ಹಾಗೂ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ವಿಶೇಷ ಚೇತನರಾದ ಮೌಲಾನಾ ಯಾಸೀನ ಚಟ್ಟರಕಿ ಇವರಿಗೆ ಫೌಂಡೇಶನ್ ವತಿಯಿಂದ ಕೊಡಮಾಡಿದ ದ್ವಿಚಕ್ರ ವಾಹನವನ್ನು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ವಿತರಿಸಿದರು.**

ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ, ಸಿದ್ದನಗೌಡ ಪಾಟೀಲ (ನಾವದಗಿ), ಪ್ರಭುಗೌಡ




ಮದರಕಲ್ಲ,ಸಂಗನಗೌಡ ಲಿಂಗದಳ್ಳಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮೆಹಬೂಬ ಕೆಂಭಾವಿ, ಸಂಗನಗೌಡ ಅಸ್ಕಿ, ಸಿಆರ್ಸಿ ರಾಜು ವಿಜಾಪುರ,ಮಹಾಂತೇಶ ಮುರಾಳ, ಇಬ್ರಾಹೀಮ ಮನ್ಸೂರ, ಹಸನಸಾಬ ಕೋರ್ಕಿ, ನಾಸೀರ ಹುಸೇನ ಇನಾಮದಾರ, ಫೌಂಡೇಶನ್ ಅಧ್ಯಕ್ಷ ಮೊಹಮ್ಮದ್ ಶಫೀಕ ಇನಾಮದಾರ,ಆಸೀಫ ಕೆಂಭಾವಿ, ಶೌಕತ್ ಲಾಹೋರಿ ಹಾಗೂ ಫೌಂಡೇಶನ್ ದ ಪದಾಧಿಕಾರಿಗಳು ಇದ್ದರು.

# ಅಂಬೇಡ್ಕರ್ ನಾಮಫಲಕ ಮರುಸ್ಥಾಪನೆ ವಿಳಂಬಕ್ಕೆ ಖಂಡನೆ ಅಧಿಕಾರಿಗಳ ವಿರುದ್ಧ ಫೆ. 23 ರಂದು ರಸ್ತೆ ತಡೆ, ಧರಣಿ ಎಚ್ಚರಿಕೆ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ತಾಲೂಕಿನ ಹಿರೇಕೊಟ್ಟೆಕಲ್ ಗ್ರಾಮದಲ್ಲಿ ರಸ್ತೆ ಅಗಲೀಕರಣದ ವೇಳೆ ತೆರವುಗೊಳಿಸಲಾದ ಡಾ. ಬಿ.ಆರ್. ಅಂಬೇಡ್ಕರ್ ಅವರ ನಾಮಫಲಕವನ್ನು ಮರುಸ್ಥಾಪನೆ ಮಾಡದೆ ಅಧಿಕಾರಿಗಳು ಅವಮಾನ ಮಾಡುತ್ತಿದ್ದಾರೆ ಎಂದು ಕರ್ನಾಟಕ ಪ್ರದೇಶ ಮಾದಿಗರ ಸಂಘದ ರಾಜ್ಯಾಧ್ಯಕ್ಷ ಪ್ರಭುರಾಜ್ ಕೊಡ್ಲಿ ಹೇಳಿದರು.**

ಅವರಿಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಲಿತ ಪರ ಸಂಘಟನೆಗಳ ಒಕ್ಕೂಟ ಮಾನ್ವಿ ವತಿಯಿಂದ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸುಮಾರು 10?12 ವರ್ಷಗಳ ಹಿಂದೆ ಗ್ರಾಮದಲ್ಲಿ ಸ್ಥಾಪಿಸಲಾದ ನಾಮಫಲಕವನ್ನು ರಸ್ತೆ ಅಗಲೀಕರಣದ ಸಂದರ್ಭದಲ್ಲಿ 1 ವಾರದಲ್ಲಿ ಮರುಸ್ಥಾಪನೆ ಮಾಡುತ್ತೇವೆ ಎಂದು ಭರವಸೆ ನೀಡಿ



ತೆರವುಗೊಳಿಸಲಾಯಿತು. ಆದರೆ ಹಲವು ತಿಂಗಳು ಕಳೆದರೂ ನಾಮಫಲಕ ಮರುಸ್ಥಾಪನೆ ಮಾಡದೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿಸುತ್ತಿರುವುದು ಅಂಬೇಡ್ಕರ್ ಅನುಯಾಯಿಗಳಿಗೆ ಹಾಗೂ ದಲಿತ ಸಮುದಾಯಕ್ಕೆ ಅಪಮಾನಕರವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಕಳೆದ 3–4 ತಿಂಗಳಿಂದ ತಹಸೀಲ್ದಾರ್ ಕಚೇರಿಗೆ ಸುಮಾರು 30?40 ಬಾರಿ ಭೇಟಿ ನೀಡಿ ಮನವಿ ಸಲ್ಲಿಸಿದರೂ ತಹಸೀಲ್ದಾರ್ ಹಾಗೂ ರಸ್ತೆ ಅಗಲೀಕರಣದ ಅಧಿಕಾರಿಗಳಾದ ವಿಕಾಸ್ ಮತ್ತು ಸುಬ್ರಮಣ್ಯ ಅವರು ಸ್ಪಷ್ಟ ಕ್ರಮ ಕೈಗೊಳ್ಳದೆ ದಿನಾಲೂ ಸುಳ್ಳು ಹೇಳಿ ಕಾಲಹರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಹೀಗಾಗಿ ಫೆಬ್ರವರಿ 23, 2026 ರಂದು ಹಿರೇಕೊಟ್ಟೆಕಲ್ ಗ್ರಾಮದ ಮುಖ್ಯ ರಸ್ತೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ನಾಮಫಲಕ ಮರುಸ್ಥಾಪನೆ ಆಗುವವರೆಗೆ ಬೃಹತ್ ಧರಣಿ ಸತ್ಯಾಗ್ರಹ ಹಾಗೂ ರಸ್ತೆ ತಡೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ತಿಪ್ಪಣ್ಣ ಬಾಗಲವಾಡ ಕೂಡ ಮಾತನಾಡಿ, ಅಂಬೇಡ್ಕರ್ ಅವರ ನಾಮಫಲಕ ಮರುಸ್ಥಾಪನೆ ವಿಚಾರದಲ್ಲಿ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು.

ಇಲ್ಲವಾದಲ್ಲಿ ದಲಿತ ಸಮುದಾಯದ ಗೌರವ ಕಾಪಾಡುವ ನಿಟ್ಟಿನಲ್ಲಿ ತೀವ್ರ ಹೋರಾಟ ಅನಿವಾರ್ಯವಾಗುತ್ತದೆ ಎಂದು ಹೇಳಿದರು. ಅಂ–ದು ನಡೆಯುವ ಹೋರಾಟದಲ್ಲಿ ತಾಲ್ಲೂಕಿನ ಎಲ್ಲಾ ಸಮುದಾಯದ ಹೋರಾಟಗಾರರು, ದಲಿತ ಪರ ಸಂಘಟನೆಗಳ ಮುಖಂಡರು, ಅಂಬೇಡ್ಕರ್ ಅನುಯಾಯಿಗಳು, ವಕೀಲರು, ಯುವಕರು ಹಾಗೂ ಬುದ್ದಿಜೀವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಶಿವರಾಜ್ ಚಾನೇಕಲ್, ಬುಡ್ಡಪ್ಪ ನಾಯಕ ಮಲ್ಲಿನಮಡ್ಗು, ಚಲುವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಶಿವರಾಜ್ ಉಮಳಿಹೊಸೂರು, ನರಸಪ್ಪ ಜೂಕುರ್, ನರಸಿಂಹ ರಾಜೊಳ್ಳಿ, ದತ್ತಾತ್ರೇಯ ಹಿರೇಕೊಟ್ನೆಕಲ್, ಕಾಮೇಶ್, ಹಂಪಯ್ಯ ನಾಯಕ ಸೇರಿದಂತೆ ಇನ್ನಿತರರು ಇದ್ದರು

## ಸಾಹಿತ್ಯ ಸಿಂಚನ

ಒಲವೇ ವಿಸ್ಮಯ..!

ಮಾತನಾಡಿಸಲೆಂದು ಬಂದೆ
ಮೌನದೆದುರು ಮಾತು ಮರೆತು
ಮರುಳಾಗಿ ಮೈಮರೆತು ನಿಂದೆ.!

ಗೆದ್ದು ಬೀಗಬೇಕೆಂದುಕೊಂಡೆ
ಹೂನಗೆಯೆದುರು ನನಗರಿವಿಲ್ಲದೆ
ಬಾಗುತ ಸೋಲೊಪ್ಪಿಕೊಂಡೆ.!

ಕಥೆಗಳ ಹೇಳಬೇಕೆಂದು ಬಂದೆ
ಕವಿತೆಯೆದುರು ಕಣ್ಣುಮಿಟುಕಿಸದೆ
ಕಿವಿಯಾಗಿ ಕವಿಯಾಗಿ ಹೋದೆ.!

ಕೀಟಲೆ ಮಾಡಬೇಕೆಂದುಕೊಂಡೆ
ಕಕ್ಕುಲತೆಯೆದುರು ಕರಗಿ ನೀರಾಗಿ
ಕಣಕಣದಿ ಕಾಮನಬಿಲ್ಲು ಕಂಡೆ.!

ಪ್ರೇಮದ ಪಟ್ಟು ಹಾಕಲು ಬಂದೆ
ಪ್ರೀತಿಯೆದುರು ನಾ ಪರವಶನಾಗಿ
ಶಬ್ಧಗಳೆ ಇಲ್ಲದೆ ಶರಣಾಗತನಾದೆ.!

ಚಿತ್ರವನು ಬಿಡಿಸಬೇಕೆಂದುಕೊಂಡೆ
ಚಂದ್ರಿಕೆಯೆದುರು ಚಿತ್ತಚಿತ್ತಾರವಾಗಿ
ಕುಂಚವೆ ಕಳೆದುಹೋದದ್ದ ಕಂಡೆ.!

ಒಲವ ನಿವೇದಿಸಿ ಒಲ್ಲೈಸ ಬಂದೆ
ಒಲುಮೆ ಒಡಲೆದುರು ಆರ್ದ್ರನಾಗಿ
ಆರಾಧಿಸುತ ನನ್ನೆ ಅರ್ಪಿಸಿ ನಿಂದೆ.!

ಬಿಗಿದು ಬಂಧಿಸಬೇಕೆಂದುಕೊಂಡೆ
ಜೀವ ಭಾವ ಬೆಸೆದು ಬಂಧಿತನಾಗಿ
ಅವಿನಾಭಾವ ಬೆರೆತು ಐಕ್ಯಗೊಂಡೆ.!

ಎ.ಎನ್.ರಮೇಶ್.ಗುಬ್ಬಿ.

## ಬೊಮ್ಮನಾಳದಲ್ಲಿ ಚರ್ಚ್ ಹೆಬ್ಬಾಗಿಲು ಅನಾವರಣ, ಸನ್ಮಾನ ಕ್ರೈಸ್ತ ಮಿಷನರಿಗಳ ಶೈಕ್ಷಣಿಕ, ಆರೋಗ್ಯ ಸೇವೆ ಅನನ್ಯ–ಬಿ.ವೆಂಕಟಸಿಂಗ್

ನೈಜ್ಯ ದೆಸೆ ನ್ಯೂಸ್

ರಾಯಚೂರು: ಸಮಾಜದಲ್ಲಿ ಬಡವರಿಗೆ ಕ್ರೈಸ್ತ ಮಿಷನರಿಗಳು ಮಾಡಿದ ನೆರವಿನಿಂದ ಶಿಕ್ಷಣ ಮತ್ತು ಅವಕಾಶ ವಂಚಿತರು ಮುನ್ನೆ?ಲೆಗೆ ಬರಲು ಅನುಕೂಲವಾಗಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಕಲಬುರ್ಗಿ ಪೀಠದ ಆಯುಕ್ತ ಬಿ.ವೆಂಕಟಸಿಂಗ್ ಹೇಳಿದರು. ಅವರು ಜಿಲ್ಲೆ ಯ ದೇವದುರ್ಗ ತಾಲೂಕಿನ ಸ್ವಗ್ರಾಮ ಬೊಮ್ಮನಾಳ ಗ್ರಾ?ಮದಲ್ಲಿ ನಿರ್ಮಿಸುತ್ತಿರುವ ಕ್ರೈಸ್ತ ಸಮುದಾಯದ ಚರ್ಚ್ ಹೆಬ್ಬಾ?ಗಿಲು ಅನಾವರಣಕ್ಕೆ? ಚಾಲನೆ ನೀಡಿದ ಅವರು ಮೇಥ–ೋಡಿಸ್ಟ್ ಸಮುದಾಯದವರಿಂದ ಸನ್ಮಾ?ನ ಸ್ವೀಕರಿಸಿ ಮಾತನಾಡಿದರು.

ದೇಶದ ಸ್ವಾ?ತಂತ್ರ ಪೂರ್ವ ಮತ್ತು ನಂತರ ಗ್ರಾ?ಮೀಣ ಪ್ರದೇಶದಲ್ಲಿ ಶಿಕ್ಷಣ ವಂಚಿತ ಸಮುದಾಯಗಳಿಗೆ ಶಿಕ್ಷಣ ಹಾಗೂ ವೈದ್ಯಕೀಯ ಸೌಲಭ್ಯ ನೀಡುವಲ್ಲಿ ತಮ್ಮದೆ ಆದ ಕೊಡುಗೆ ನೀಡಿರುವ ಕ್ರೈಸ್ತ ಸಮುದಾಯವನ್ನು ಜನಸಾಮಾನ್ಯರು ಮರೆತಿಲ್ಲ ಎಂದರು. ಬೊಮ್ಮನಾಳ ಗ್ರಾ?ಮದಲ್ಲಿ ಕಳೆದ ಐದು ದಶಕಗಳ ಹಿಂದೆ ಚರ್ಚ್ ನಿರ್ಮಿಸಲಾಗಿ–ತ್ತು ಈಗ ಹಳೆಯದಾದ ಚರ್ಚ್ ಪುನರ್ ನಿರ್ಮಾಣಗೊಳ್ಳುತ್ತಿ?ರುವುದು ಸಂತಸದ



ವಿಚಾರ. ನಮ್ಮ ಕುಟುಂಬಕ್ಕೆ? ಹಾಗೂ ನಮ್ಮ ಗ್ರಾ?ಮದ ಕ್ರೈಸ್ತ ಸಮಯುದಾಯಕ್ಕೆ? ಮೂರು ತಲೆಮಾರಿನ ಸಂಬಂಧ ಇದೆ. ನಮ್ಮ ಸ್ವಂತ ಮನೆಯನ್ನು ಪಾರ್ಥನೆ ಮಾಡಲು ಚರ್ಚ್‌ಗೆ ಬಿಟ್ಟುಕೊಡಲಾಗಿತ್ತು ಅದೇ ಹಳೆ ಮನೆಯಲ್ಲಿ ಈಗ ಕ್ರೈಸ್ತ ಸಮಯದಾಯದ ಸಮುದಾಯ ಭವನ ನಿರ್ಮಾಣವಾಗುತ್ತಿ?ರುವುದು ಸಂತಸದ ಸಂಗತಿ ಎಂದು ಹೇಳಿದರು.

ಏನೇ ಸಮಸ್ಯೆ? ಇದ್ದರು, ಮಕ್ಕಳಿಗೆ ಶಿಕ್ಷಣದಿಂದ ಮಚತರನ್ನಾ?ಗಿ ಮಾಡಬಾರದು ಎಂದು ಸಲಹೆ ಮಾಡಿದ ಅವರು ಗ್ರಾ?ಮದಲ್ಲಿ ಎಲ್ಲಾ ಸಮುದಾಯದೊಂದಿಗೆ ಸಾಮರಸ್ಯ ಜೀವನ ನಡೆಸುವಂತೆ ಸಲಹೆ ನೀಡಿ ಇದೇ ಓಣಿಯಲ್ಲಿ ಹುಟ್ಟಿ? ಬೆಳೆದು ಬಂದ ತಮ್ಮ ಬಾಲ್ಯದ ಜೀವನದ ನೆನಪು ಮೆಲಕು ಹಾಕಿದರು. ಸಿರವಾರ ಜಿಲ್ಲಾ ಮೆಥೋಡಿಸ್ಟ್ ಚರ್ಚ್‌ಗಳ ಜಿಲ್ಲಾ ಮೇಲ್ವಿ?ಚಾರಕರಾದ ಸುಂದರರಾಲ ಸಾಮ್ಯುಯಲ್ ಮಾತನಾಡಿ ಪರಮ ಪವಿತ್ರವಾದ ಯೇಸು ಪ್ರಭುವಿನ ಮಕ್ಕಳಾದ ನೀವು ಇಂದು ಇಂತಹ ಹಳ್ಳಿ?ಯಲ್ಲಿ ಭವ್ಯ ಚರ್ಚ್ ನಿರ್ಮಾಣ ಮಾಡುತ್ತಿ?ರುವುದು ಶ್ಲಾ?ಘನೀಯ ಎಂದರು.

ಎಲ್ಲ ಸಮುದಾಯದವರೊಂದಿಗೆ ಸಮನ್ವಯತೆಯಿಂದ ಬದುಕು ಸಾಗಿಸಿ ಮಕ್ಕಳಿಗೆ ಶಿಕ್ಷಣ ನೀಡಲು ಹೇಳಿದರು. ಈ ಹಿಂದೆ ಚರ್ಚ ನಿರ್ಮಾಣ ಮಾಡಿದ ಅದರ ಪುನರ್ ನಿರ್ಮಾಣ ಮಾಡುತ್ತಿ?ರುವುದು



ಗ್ರಾ?ಮದಲ್ಲಿ ಕ್ರೈಸ್ತ ಸಮುದಾಯದವರು ಯೇಸು ಪ್ರಭೂವಿನಲ್ಲಿಟ್ಟಿ?ರುವ ಪ್ರೀ?ತಿಯೇ ಕಾರಣ ಎಂದು ಹೇಳಿದರು. ಇದಕ್ಕೂ ಮುನ್ನ ತಮ್ಮ ಗ್ರಾ?ಮದ ಹಿರಿಯ ಪತ್ರಕರ್ತರಾದ ಬಿ.ವೆಂಕಟಸಿಂಗ್ ಅವರು ಮಾಹಿತಿ ಆಯೋಗದ ಆಯುಕ್ತರಾದ ಹಿನ್ನೆ?ಲೆಯಲ್ಲಿ ಮೆರವಣಿಗೆ ಮೂಲಕ ಸ್ವಾ?ಗತಿಸಲಾಯಿತು.ಇದೇ ವೇಳೆ ಮಾಹಿತಿ ಆಯೋಗದ ಆಯುಕ್ತರಾದ ಬಿ.ವೆಂಕಟಸಿಂಗ್ ಅವರನ್ನು ಸನ್ಮಾ?ನಿಸಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ರುಬೇನ್, ಜಾನಪ್ಪಫಿ, ಸಾಮ್ಯುವೆಲ್, ದೇವಪುತ್ರ ಗೆಜ್ಜಲಪ್ಪಫಿ, ಸುರೇಶ, ಜಯಪ್ಪಫಿ, ಆನಂದಪ್ಪಫಿ, ಶಾಂತರಾಜು, ರಾಜು, ಯೇಸಪ್ಪ ಮತ್ತಿ?ತರರಿದ್ದರು.

## ಮುದಗಲ್ ಸಹನಾ ಶಾಲೆಯಲ್ಲಿ ಸಂಭ್ರಮದ 'ಗಣಿತ ವಸ್ತುಪ್ರದರ್ಶನ




ನೈಜ್ಯ ದೆಸೆ ನ್ಯೂಸ್

ಮುದಗಲ್: ಸ್ಥಳೀಯ ಸಹನಾ ಶಾಲೆಯಲ್ಲಿ 2026ರ ಸಾಲಿನ ಗಣಿತ ವಸ್ತುಪ್ರದರ್ಶನವು (Maths Expo-2026) ಅತ್ಯಂತ ವಿಜೃಂಭಣೆಯಿಂದ ಜರುಗಿತು. ವಿದ್ಯಾರ್ಥಿಗಳಲ್ಲಿ ಗಣಿತ ವಿಷಯದ ಬಗ್ಗೆ ಇರುವ ಭಯವನ್ನು ಹೋಗಲಾಡಿಸಿ, ಆಸಕ್ತಿ ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸ್ಥಳೀಯ ಶಿಕ್ಷಣ ಪ್ರೇಮಿ ಮಾಪಾಶ ಡಿ. ಡಿ ಉದ್ಘಾಟಿಸಿದರು. ಗಣಿತವು ಕೇವಲ ಅಂಕಿ–ಅಂಶಗಳ ಆಟವಲ್ಲ, ಅದು ಜೀವನದ ಪ್ರತಿ ಹಂತದಲ್ಲೂ ಅಡಗಿರುವ ಅದ್ಭುತ ಕಲೆ ಎಂದು ಅವರು ಈ ಸಂದರ್ಭದಲ್ಲಿ ತಿಳಿಸಿದರು.ಶಾಲೆಯ ನೂರಾರು ವಿದ್ಯಾರ್ಥಿಗಳು ಗಣಿತಕ್ಕೆ ಸಂಬಂಧಿಸಿದ ವಿವಿಧ ಮಾದರಿಗಳನ್ನು (Models) ಪ್ರದರ್ಶಿಸಿದರು.ಪೈಥಾಗೋರಸ್ ಪ್ರಮೇಯದ ಪ್ರಾಯೋಗಿಕ ಮಾದರಿಗಳು, ಜ್ಯಾಮಿತೀಯ ಆಕೃತಿಗಳ ರಚನೆ,ವೇಗವಾಗಿ ಲೆಕ್ಕ ಮಾಡುವ ವೈದಿಕ ಗಣಿತದ ಸೂತ್ರಗಳು,ದೈನಂದಿನ ಜೀವನದಲ್ಲಿ ಗಣಿತದ ಬಳಕೆ ಕುರಿತಾದ ಪ್ರಾತ್ಯಕ್ಷಿಕೆಗಳು ಗಮನ ಸೆಳೆದವು.

ಕಾರ್ಯಕ್ರಮಕ್ಕೆ ಆಗಮಿಸಿದ್ದ ಪಾಲಕರು ಮತ್ತು ಸಾರ್ವಜನಿಕರು ವಿದ್ಯಾರ್ಥಿಗಳ ಸೃಜನಶೀಲತೆಯನ್ನು ಕಂಡು ಹರ್ಷ ವ್ಯಕ್ತಪಡಿಸಿದರು. ಸಂಕೀರ್ಣವಾದ ಲೆಕ್ಕಗಳನ್ನು ಮಕ್ಕಳು ಸರಳವಾಗಿ ವಿವ–ರಿಸುತ್ತಿದ್ದ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.ಶಾಲೆಯ ಮುಖ್ಯೋಪಾಧ್ಯಾಯ ಆದಪ್ಪ ಅವರು ಮಾತನಾಡಿ, "ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಇಂತಹ ವೇದಿಕೆಗಳು ಸಹಕಾರಿ ಎಂದು ಅವರು ತಿಳಿಸಿದರು. ಸಂಸ್ಥೆಯ ಕಾರ್ಯದರ್ಶಿಯರಾದ ಎಂ. ಜಾಹೇದ್ ಹುಸೇನ್ ಮಾತನಾಡಿ ಸಹನಾ ಶಾಲೆಯು ಯಾವಾಗಲೂ ಗುಣಮಟ್ಟದ ಶಿಕ್ಷಣ ಮತ್ತು ಪ್ರಾಯೋಗಿಕ ಕಲಿಕೆಗೆ ಆದ–್ಯತೆ ನೀಡುತ್ತದೆ" ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಮತ್ತು ಪಾಲಕ–ರಿಗಾಗಿ ಉಪಹಾರದ ವ್ಯವಸ್ಥೆ ಸಂಸ್ಥೆಯ ವತಿಯಿಂದ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಶಾಲೆಯ ಆಯೇಶಾ ಬಾನು, ಪ್ರಿಯಾಂಕ,ಕವಿತಾ, ನೀಲು ಬಾಯಿ, ಹೀನ ಬೇಗಂ, ಜೀಶಾನ್, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.ಕಾರ್ಯಕ್ರಮವನ್ನು ಶಿಕ್ಷಕಿಂ–ಯಾದ ಅಸ್ಮ ಬೇಗಂ ನಿರೂಪಿಸಿದರು.

## ಸರ್ಕಾರಿ ನೌಕರ ಸಂಘದ ಪದಾಧಿಕಾರಿಗಳ ನೇಮಕ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ರಾಜ್ಯ ಸರ್ಕಾರಿ ನೌಕರ ಸಂಘ ತಾಳಿಕೋಟಿ ತಾಲೂಕ ಘಟಕದ ಅಧ್ಯಕ್ಷರಾದ ಶಿವರಾಜ್ ಚೌದರಿ ರವರು ತಾಲೂಕಿನ ರಾಜ್ಯ ಸರ್ಕಾರಿ ನೌಕರ ಸಂಘದ ಪದಾಧಿಕಾರಿಗಳನ್ನು ಬುಧವಾರ ನೇಮಕ ಮಾಡಿದರು.




ನಿರ್ದೇಶಕರಾದ ಎಸ್ ಸಿ ಬಿರಾದಾರ ಇವರನ್ನು ರಾಜ್ಯ ಪರಿಷತ್ ಸದಸ್ಯರನ್ನಾಗಿ, ಎಸ್.ಬಿ.ಬಿರಾದಾರ ಇವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಹಾಗೂ ಸತೀಶ ಕುಲಕರ್ಣಿ ಅವರನ್ನು ಖಜಾಂಚಿಗಳನ್ನಾಗಿ ನೇಮಕ ಮಾಡಲಾಗಿದೆ ಈ ಸಂದರ್ಭದಲ್ಲಿ ಕ್ಷೇತ್ರ ಸಮನ್ವಯಾ ಧಿಕಾರಿಗಳಾದ ಆರ್.ಬಿ.ದಮ್ಮೂರ ಮಠ ಉಪಸ್ಥಿತಿರಿದ್ದರು.

## ಫೆ.24ರಂದು ಯೋಗಿ ನಾರೇಯಣ ಯತೀಂದ್ರರ ಜಯಂತಿ ಪೂರ್ವಭಾವಿ ಸಭೆ



ನೈಜ್ಯ ದೆಸೆ ನ್ಯೂಸ್

ರಾಯಚೂರು: ಮಾರ್ಚ 3ರಂದು ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಆಚ–ರಣೆ ಹಿನ್ನೆಲೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.24ರ ಮಧ್ಯಾಹ್ನ 12 ಗಂಟೆಗೆ ಯಕ್ಲಾಸಪುರ ನೂತನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಸಂಘ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಅಧಿಕಾ–ರಿಗಳು ಸಭೆಗೆ ಆಗಮಿಸಲು ಕೋರಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಪಲ್ಟಿ ಹೊಡೆದು ಹೋಟೆಲ್ ಗೆ ನುಗ್ಗಿದ ಕಾರು

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದ ಮಾತೇ ಮಾಣಿಕೇಶ್ವರಿ ಮಠದ ಹತ್ತಿರವಿರುವ ವೀರೇಶ ಎನ್ನುವವರ ಹೋಟೇಲ್ ಗೆ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಪಲ್ಟಿ ಹೊಡೆದು ಹೋಟೆಲ್ ಗೆ ನುಗ್ಗಿದ್ದು ಇದರಿಂದ ಯಾವುದೆ ಪ್ರಾಣಾಪಾಯ ಸಂಭವಿಸಿಲ್ಲ.

ಇಂದು ಬೆಳಗ್ಗೆ ಸುಮಾರು 11 ಗಂಟೆಗೆ ಪಟ್ಟಣದ ಮಾತೇಮಾಣಿಕೇಶ್ವರಿ ಮಠದ ಹತ್ತಿರ ಬೀದರ ಶ್ರೀರಂಗಪಟ್ಟಣ 150ಎ (ಎನ್ ಎಚ್ ) ರಾಷ್ಟಿಯ ಹೆದ್ದಾರಿಯಲ್ಲಿ ಘಟನೆ ನಡೆದಿದೆ.



ಈ ಕಾರ್ ಅನ್ನು ಅಪ್ರಾಪ್ತರು ಚಲಾಯಿಸುತ್ತಿದ್ದರು ಎಂದು ಹೇಳಲಾಗುತ್ತಿದ್ದು ಗುರುಗುಂಟಾ ಕಡೆಯಿಂದ ಲಿಂಗಸಗೂರು ಪಟ್ಟಣ–ಕ್ಕೆ ಬರುತ್ತಿರುವಾಗ ಅಪ್ರಾಪ್ತರು ಕಾರನ್ನು ಅತೀವೇಗವಾಗಿ ಚಲಾಯಿಸಿದ್ದೆ ಘಟನೆಗೆ ಕಾರಣ ಎನ್ನಲಾಗುತ್ತಿದೆ ಅತೀ ವೇಗದಿಂದ ಚಾಲಕನ ನಿಯಂತ್ರಣ ತಪ್ಪಿದ ಕಾರು ಪಲ್ಟಿ ಹೋಡೆಯುತ್ತಾ ಹೋಟೇಲ್ ಕಂಪೌಂಡ ಗೋಡೆಗೆ ಗುದ್ದಿ ಕಾರು ಪಲ್ಟಿ ಹೊಡೆದು ಹೊಟೇಲ್ ಒಳಗೆ ನುಗ್ಗಿದೆ ಕಾರಿನಲ್ಲಿರುವವರು ಮಾತ್ರ ಪ್ರಾಣಾಪಾದಿಂದ ಪರಗಿದ್ದರೆಂದು ಹೇಳಲಾಗುತ್ತಿದೆ. ಅನ್ಯ ಕಾರ್ಯಕ್ರಮದ ನಿಮಿತ್ಯವಾಗಿ ಇಂದು ಹೋಟೆಲ್ ಬಂದ್ ಮಾಡಲಾಗಿ–ತ್ತು ಎಂದು ಹೇಳಲಾಗುತಿದ್ದು ಹೊಟೇಲ್ ತೆಗೆದಿದ್ದರೆ ಅಪಾಯ ಕಟಿಟ್ಟ ಬುತ್ತಿ

## ಅವಧೂತ ಶುಕಮುನಿಸ್ವಾಮಿ ಜಾತ್ರಾ ರಥೋತ್ಸವ ಮಹೋತ್ಸವ




ನೈಜ್ಯ ದೆಸೆ ನ್ಯೂಸ್

ಸಾಮರಸ್ಯದ ಜಾತ್ರೆ ಎಂದು ಹೆಸರಾಗಿರುವ ತಾಲ್ಲೂಕಿನ ಅವಧೂತ ಶುಕಮುನಿಸ್ವಾಮಿ ಜಾತ್ರಾ ಮಹೋತ್ಸವದ ನಿಮಿತ್ತ ಮಂಗಳವಾರ ಮಹಾರಥೋತ್ಸವ ಸಂಭ್ರಮ ಮತ್ತು ಶ್ರದ್ಧಾಭಕ್ತಿಯೊಂದಿಗೆ ನೆರವೇರಿತು. ಕಳೆದ ಒಂದು ವಾರದಿಂದಲೂ ನಡೆದ ಮುತ್ತ್ಯಾನ ಪಲ್ಲಕ್ಕಿ ರಥಬೀದಿಗೆ ಬಂದ ನಂತರ ಮಹಾರಥ–ೋತ್ಸವಕ್ಕೆ ಶಾಸಕ ದೊಡ್ಡನಗೌಡ ಪಾಟೀಲ ಚಾಲನೆ ನೀಡಿದರು.ರಥಬೀದಿಯಲ್ಲಿ ನೆರೆದಿದ್ದ ಭಕ್ತರು ಹರ್ಷೋದ್ಗಾರದೊಂದಿಗೆ ರಥ ಎಳೆದರು.

ದೋಟಿಹಾಳ ಕೇಸೂರು ಹಾಗೂ ಸುತ್ತಲಿನ ನಗರ ಪಟ್ಟಣಗಳು ಹಾಗೂ ನೆರೆರಾಜ್ಯಗಳ ಜನರೂ ಸೇರಿದಂತೆ ಸಹಸ್ರ ಸಂಖ್ಯೆ ಭಕ್ತರು ಅವಧೂತ 'ಶುಕಮುನಿ ಮುತ್ತ್ಯಾ'ನ ರಥಕ್ಕೆ ಉತ್ತತ್ತಿ ಎಸೆಯುವ ಮೂಲಕ ರಥೋತ್ಸವವನ್ನು ಕಣ್ತುಂಬಿಕೊಂಡರು. ಮಹಿಳೆಯರು, ಮಕ್ಕಳು, ಪ್ರತಿನಿಧಿಗಳು, ವಿವಿಧ ಕ್ಷೇತ್ರಗಳ ಗಣ್ಯರು ಸೇರಿದಂತೆ ಅಪಾರ ಜನಸಮೂಹ ಸಂಭ್ರಮದ ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾಯಿತು. ಜಾತ್ರೆ ನಿಮಿತ್ತ ಶುಕಮುನಿ ಮಠದಲ್ಲಿ ಪಂಚಾಮೃತ ಅಭಿಷೇಕ, ಮಹಾಅಭಿಷೇಕ ಬಿಲ್ವಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಭಕ್ತರು ವಿವಿಧ ರೀತಿಯಲ್ಲಿ ಹರಕೆ ತೀರಿಸಿದರು.

ವಿವಿಧ ಗ್ರಾಮಗಳ ಬಹಳಷ್ಟು ರೈತಾಪಿ ಜನರು ಎತ್ತಿನಗಾಡಿ, ಇತರೆ ವಾಹನಗಳ ಮೂಲಕ ರಥೋತ್ಸವಕ್ಕೆ ಆಗಮಿಸಿದ್ದರಿಂದ ಬಹಳಷ್ಟು ನೂಕುನುಗ್ಗಲು ಉಂಟಾಗಿತ್ತು. ಮಿತಿಮೀರಿದ ವಾಹನಗಳಿಂದಾಗಿ ರಸ್ತೆಸಂಚಾರಕ್ಕೆ ಅಡ್ಡಿಯಾಗಿತ್ತು. ಮಾಜಿ ಸಂಸದ ಸಂಗಣ್ಣ ಕರಡಿ, ವಿಧಾನಸಭೆ ಪ್ರತಿಪಕ್ಷದ ಮುಖ್ಯಸಚೇತಕ ದೊಡ್ಡನಗೌಡ ಪಾಟೀಲ, ಮಾಜಿ ಸಚಿವ ಅಮರೇಗೌಡ ಬಯ್ಯಾಪುರ, ತುಂಗಭದ್ರಾ ಕಾಡಾ ಅಧ್ಯಕ್ಷ ಹಸನಸಾಬ್ ದೋಟಿಹಾಳ, ತಹಶೀಲ್ದಾರ್ ಅಶೋಕ ಶಿಗ್ಗಾವಿ, ಡಾ.ಬಸವರಾಜ ಕ್ಯಾವಟರ್, ಮಹಾಂತೇಶ ಬದಾಮಿ, ಲಾಡ್‌ಸಾಬ್ ಕೊಳ್ಳಿ ಉಪಸ್ಥಿತರಿದ್ದರು. ರಾತ್ರಿ ಸಾಮಾಜಿಕ ನಾಟಕ, ವಿವಿಧ ರಸಮ–ಂಜರಿ, ಸಂಗೀತ ಕಾರ್ಯಕ್ರಮಗಳು ನಡೆದವು.

## ಡೊಂಕಮಡು ಜಾತ್ರೆಯಲ್ಲಿ ಅಚ್ಚರಿ ಘಟನೆ: ಕುದಿಯುತ್ತಿದ್ದ ಪ್ರಸಾದಕ್ಕೆ ಬರಿಗೈ ಹಾಕಿದ ದ್ಯಾಮಣ್ಣ ದಿಂಡವಾರ

ನೈಜ್ಯ ದೆಸೆ ನ್ಯೂಸ್

ಮುದ್ದೇಬಿಹಾಳ: ತಾಲ್ಲೂಕಿನ ಕೊನೆಯ ಗ್ರಾಮವಾದ ಡೊಂಕಮಡು ಗ್ರಾಮದಲ್ಲಿ ನಡೆದ ಐತಿಹಾಸಿಕ ಪವಾಡಪುರುಷ ಹಾಗೂ ಸಿದ್ಧಿಪುರುಷ ಗಿರಿಯಪ್ಪ ಮುತ್ಯಾನ ಜಾತ್ರಾ ಮಹೋತ್ಸವವು ಭಕ್ತಿಭಾವ ಮತ್ತು ಸಂಭ್ರಮದ ನಡುವೆ ನಡೆಯಿತು. ಮಂಗಳವಾರದ ಜಾತ್ರಾ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ದರ್ಶನ ಪಡೆದರು.

ಜಾತ್ರೆಯ ವೇಳೆ ದೇವಸ್ಥಾನದ ಆವರಣದಲ್ಲಿ ಡೊಳ್ಳಿನ ನಿನಾದ ಹಾಗೂ ಭಕ್ತರ



ಜಯಘೋಷಗಳ ಮಧ್ಯೆ ಅಚ್ಚರಿ ಮೂಡಿಸುವ ಘಟನೆ ನಡೆಯಿತು. ಈ ಭಾಗದಲ್ಲಿ ಗಿರಿಯಪ್ಪ ಮುತ್ಯಾನ ಆರಾಧಕರಾಗಿ ಗೌರವಿಸಲ್ಪಡುವ ದ್ಯಾಮಣ್ಣ ದಿಂಡವಾರ ಅವರು ಒಲೆಯ ಮೇಲೆ ಕುದಿಯುತ್ತಿದ್ದ ಅನ್ನ, ಸಾರು ಹಾಗೂ ಬಾಳೆಹಣ್ಣಿನ ಸಿಹಿ ಪಾಯಸದ ಪಾತ್ರೆಗಳಿಗೆ ಬರಿಗೈ ಹಾಕಿ ಪ್ರಸಾದವನ್ನು ತೆಗೆದು ಭಕ್ತರಿಗೆ ವಿತರಿಸಿದರು ಎಂದು ಅಲ್ಲಿದ್ದ ಭಕ್ತರು ತಿಳಿಸಿದ್ದಾರೆ. ಈ ದೃಶ್ಯ ಭಕ್ತರಲ್ಲಿ ಭಕ್ತಿಭಾವ ಮತ್ತು ಆಶ್ಚರ್ಯ ಉಂಟುಮಾಡಿದುದಾಗಿ ಹೇಳಲಾಗಿದೆ. ಜಾತ್ರೆಯ ಸಂದರ್ಭದಲ್ಲಿ ದೇವವಾಣಿ ನುಡಿದ ಅಜ್ಜನವರು ಈ ವರ್ಷ ಮಳೆ–ಬೆಳೆ ಉತ್ತಮವಾಗಿದ್ದು, ಗ್ರಾಮದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಸಲಿದೆ ಎಂದು ಭವಿಷ್ಯ ನುಡಿದರು. ಇದರಿಂದ ರೈತರು ಹಾಗೂ ಗ್ರಾಮಸ್ಥರಲ್ಲಿ ಹರ್ಷ ವ್ಯಕ್ತವಾಯಿತು.

ಗಿರಿಯಪ್ಪ ಮುತ್ಯಾನ ಸವಾರ ಮತ್ತು ಜಾತ್ರಾ ಮಹೋತ್ಸವದ ಕುರಿತು ಭಕ್ತರಲ್ಲಿ ಅಪಾರ ನಂಬಿಕೆ ಇದ್ದು, ಇಲ್ಲಿಗೆ ಬರುವವರ ದೀರ್ಘಕಾಲದ ಕಾಯಿಲೆಗಳು ವಾಸಿಯಾಗುತ್ತವೆ ಎಂಬ ವಿಶ್ವಾಸವೂ ಗ್ರಾಮಸ್ಥರಲ್ಲಿ ಇದೆ. ಈ ಬಾರಿಯ ಜಾತ್ರೆಗೆ ಮುದ್ದೇಬಿಹಾಳ, ತಾಳಿಕೋಟೆ, ಹುಣಸಗಿ ಹಾಗೂ ವಿಜಯಪುರ ಜಿಲ್ಲೆ ಸೇರಿದಂತೆ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು. ಗ್ರಾಮದ ದೈವ ಮಂಡಳಿ ಹಾಗೂ ಸದಕ್ಷ ಮಂಡಳಿಯವರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು. ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ನೇಮಕಾತಿ ಪ್ರಕಟಣೆ

BEL ನೇಮಕಾತಿ 2026–12 ಪ್ರಾಜೆಕ್ಟ್ ಎಂಜಿನಿಯರ್–I ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ BEL ನೇಮಕಾತಿ 2026: 12 ಪ್ರಾಜೆಕ್ಟ್ ಎಂಜಿನಿಯರ್–I ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಫೆಬ್ರವರಿ 2026 ರ ಬಿಇಎಲ್ ಅಧಿಕೃತ ಅಧಿಸೂಚನೆಯ ಮೂಲಕ ಪ್ರಾಜೆಕ್ಟ್ ಎಂಜಿನಿಯರ್–I ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕೇರಳ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಮಾರ್ಚ್–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 18–02–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–ಮಾರ್ಚ್–2026 ಅಧಿಕೃತ ವೆಬ್‌ಸೈಟ್: bel-india.in

# ದುಶ್ಚಟಗಳಿಗೆ ಬಲಿಯಾಗಬೇಡಿ ಮಹೇಶ್ ಬೆಟ್ಟದೂರ್

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಗ್ರಾಮೀಣ ಪ್ರದೇಶ ಯುವಕರು ದುಶ್ಚಟಗಳಿಗೆ ಬಲಿಯಾಗದೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಹಾಗೆ ತಂದೆ ತಾಯಿಗಳ ಸೇವೆಯೊಂದಿಗೆ ಗುರುಗಳ ಮಾರ್ಗದರ್ಶನದಲ್ಲಿ ನಡೆಯಬೇಕು ನಿನ್ನೆ ಕೊರವಿ ಗ್ರಾಮದಲ್ಲಿ ಹೊಸದಾಗಿ ಕೇಂದ್ರೀಯ ಶಸ್ತ್ರಪಡೆಗೆ ನೇಮಕವಾಗಿರುವ ಯುವಕರಿಗೆ ಹಾಗೂ ಅವರ ತಂದೆ ತಾಯಿಗಳಿಗೆ ಸನ್ಮಾನ ಕಾರ್ಯಕ್ರಮ ಸಮಾರಂಭದಲ್ಲಿ ಮಾನ್ವಿ ಯುವ ಬಳಗದ ಸಂಚಾಲಕ ಮಹೇಶ್ ನಾಯಕ್ ಬೆಟ್ಟದೂರ್ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.**

ಮುಸ್ತಫ ಗುರು ಮಾತನಾಡಿ ದೇಶದ ಸೈನಿಕರಿಗೆ ಯಾವುದೇ ತೊಂದರೆಯಾದರೆ ಇವರ ಜೊತೆ ನಮ್ಮ ಯುವ ಸಮೂಹ ಸೈನಿಕರಿಗೆ ಇವರ ಕುಟುಂಬದವರಿಗೆ ಬೆನ್ನ ಹಿಂದೆ ನಾವಿರುತ್ತೇವೆ



ಸನ್ಮಾನ ಸ್ವೀಕರಿಸಿ ಮಾತನಾಡಿದ ವೆಂಕಟೇಶ್ ನಾಯಕ ಕೊರವಿ ನಾನು ತಾಯಿಯ ಆಸೆಯಂತೆ ಕಷ್ಟಪಟ್ಟು ಅಭ್ಯಾಸ ಮಾಡಿ ತರಬೇತಿಗೆ ಶಿಬಿರಕ್ಕೆ ಹೋಗದೆ ತಾಯಿಯ ಜೊತೆ ಜಮೀನಿನಲ್ಲಿ ಕೆಲಸ ಮಾಡಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ದೈಹಿಕ ವೈದ್ಯಕೀಯ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿ ಈಗ ಶಸಸ್ತ್ರ ಪಡೆಗೆ ಹೋಗುತ್ತಿರುವುದು ಸಂತಸ ತಂದಿದೆ ನನ್ನ ಗ್ರಾಮೀಣ ಪ್ರದೇಶದ ಯುವಕರು ದುಶ್ಚಟಗಳಿಗೆ ಬಲಿಯಾಗದೆ ಶರೀರವನ್ನು ಚೆನ್ನಾಗಿ ಕಾಪಾಡಿಕೊಳ್ಳಬೇಕು.

ಜೆಲ್ಲಿ ಶಿವರಾಜ್ ನಾಯಕ ನೀರಮಾನ್ವಿ ಮಾತನಾಡಿ ನಮ್ಮ ತಂದೆ ಸ್ವಂತ ದುಡಿದು ನನ್ನನ್ನು ಚೆನ್ನಾಗಿ ಅಭ್ಯಾಸ ಮಾಡಿಸಿ ಈ ಮಟ್ಟಕ್ಕೆ ತಂದಿದ್ದಾರೆ ನಾನು ನಮ್ಮ ತಂದೆ ತಾಯಿಗಳ ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ ಕೇಂದ್ರೀಯ ಶಶಸ್ತ್ರ ಪಡೆಗಳ ತಾಲೂಕ ಅಧ್ಯಕ್ಷರಾದ ಬಸವರಾಜ್ ನಾಯಕ್ ಮುಸ್ತೂರು ಮಾತನಾಡಿ ಮಾನ್ವಿ ತಾಲೂಕಿನ ಯುವಕರ ಬಳಗ ಸೈನಿಕರಗಷ್ಟೇ ಮೀಸಲಾಗದೆ ದೀನ ದಲಿತರ ಬಡವರ ಪರನಿಂತು ಕೆಲಸ ಮಾಡಿ ಕೊಡಬೇಕೆಂದರು.

ಈ ಮಾನ್ವಿ ತಾಲೂಕಿನ ಯುವಕರ ಬಳಗದ ಕಾರ್ಯ ಶ್ಲಾಘನೀಯವಾಗಿದೆ ಈ ಸಂದರ್ಭದಲ್ಲಿ ನಿವೃತ್ತ ಯೋಧರು ಹಾಲಿ ಯೋದರು ತಮ್ಮ ಅನಿಸಿಕೆ ಹಂಚಿಕೊಂಡರು ಈ ಒಂದು ಕಾರ್ಯಕ್ರಮದಲ್ಲಿ ತಾಲೂಕಿನ ಯುವ ಬಳಗ ಕೊರವಿ ಗ್ರಾಮದ ಹಿರಿಯ ಮುಖಂಡರು ಯುವಕರು ಹಾಗೂ ಸಾದಾಪುರ ಸೀಕಲ್ ನೀರಮಾನ್ವಿ ಗ್ರಾಮದ ದೇಶಪ್ರೇಮಿಗಳು ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.

## ಫೆ.21ರಂದು ಪೂರ್ವಭಾವಿ ಸಭೆ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಫೆ.28 ರಿಂದ ಮಾರ್ಚ 17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಸುಗಮವಾಗಿ ಮತ್ತು ಯಶಸ್ವಿಯಾಗಿ ನಡೆಸುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯು ಫೆ.21ರ ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆಯಲಿದೆ. ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಖುದ್ದು ಹಾಜರಾಗಬೇಕು ಎಂದು ಜಿಲ್ಲಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.**

## ಕೇಂದ್ರ ತಂಡ ಮದ್ಲಾಪೂರು ಮತ್ತು ಪೋತ್ನಾಳ ಗ್ರಾಮ ಪಂಚಾಯತಿಗೆ ಬೇಟಿ ಹಾಗೂ ನರೇಗಾ ಕಾಮಗಾರಿ ಪರಿಶೀಲನೆ:



ನೈಜ್ಯ ದೆಸೆ ನ್ಯೂಸ್

**ಮಾನವಿ: ತಾಲ್ಲೂಕಿನ ಮದ್ಲಾಪೂರು ಪಂಚಾಯತಿಗಳಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಂಡ ಕಾಮಗಾರಿಗಳನ್ನು ಕೇಂದ್ರ ಆಡಿಟ್ ತಂಡದ ಅಧಿಕಾರಿ ಶ್ರೀ ಕುಮುದ್ ದುಬೆ ರವರು ಭೇಟಿ ನೀಡಿ ಪರಿಶೀಲಿಸಿದರು.**

ಮೊದಲಿಗೆ ಮದ್ಲಾಪೂರು ಗ್ರಾಮ ಪಂಚಾಯತಿ ಕಛೇರಿಗೆ ಭೇಟಿ ನೀಡಿ ಕಾಮಗಾರಿ ಕಡತ, 7 Register, NMMS ಹಾಜರಾತಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡರು. ನಂತರ 1)ಮದ್ಲಾಪುರ್ ಗ್ರಾಮದ ಅಬ್ಬಯ್ಯ ನ ಹೊಲದಿಂದ ಬಸಯ್ಯ ನ ಹೊಲದವರೆಗೆ ನಾಲಾ ಅಭಿವೃದ್ಧಿ, 2)ಚಿಕಲ್ಪರ್ವಿ ಗ್ರಾಮದ ಸೀನಪ್ಪ ಹೊಲದಿಂದ ಕೊಡಗಿಡ್ಡ ಹಳ್ಳದವರೆಗೆ ನಾಲಾ ಅಭಿವೃದ್ಧಿ ಕಾಮಗಾ–



ರಿಗಳನ್ನು ಪರಿಶೀಲನೆ ಮಾಡುವುದರ ಜೊತೆಗೆ ಕಾಮಗಾರಿ ಕಡತಗಳನ್ನು ಪರಿಶೀಲನೆ ಮಾಡಿದರು ಮತ್ತು ಅಳತೆ ಪ್ರಮಾಣ ಪರಿಶೀಲನೆ ಮಾಡಿದರ.


ನಂತರ ಪೋತ್ನಾಳ ಗ್ರಾಮ ಪಂಚಾಯತಿಗೆ ಬೇಟಿ ನೀಡಿ 7 ರಿಜಿಸ್ಟರ್ ಗಳ ಪರಿಶೀಲನೆ, ದೂರು ದಾಖಲೆಗಳ ರಿಜಿಸ್ಟರ್ , ಅಸ್ತಿವಹಿ ರೆಜಿಸ್ಟರ್, ಔಟಿಂರುಟಿಂ ಕಾಮಗಾರಿ ಲೀಸ್ಟ್ ಪಡೆದುಕೊಂಡು ಪರಿಶೀಲನೆ ಮಾಡಿ, ಸಮಾಜಿಕ ಲೆಕ್ಕ ಪರಿಶೋದನ ಗ್ರಾಮ ಸಭೆ,ಗ್ರಾಮ ಪಂಚಾಯತಿಯ ನಡಾವಳಿಗಳು ಪರಿಶೀಲನೆ ಮಾಡಿದರು, ನಂತರ ಕೇಲವು ಕಾಮಗಾರಿ ಅಯ್ಕೆಮಾಡಿ, ಕಾಮಗಾರಿ ವೀಕ್ಷಣೆ ಗಾಗಿ ಕ್ಷೇತ್ರ ಬೇಟಿ ನೀಡಿದರು, ಪೋತ್ನಾಳ ಗ್ರಾಮ ಪಂಚಾಯತಿಯ ಜೀನೂರು ಕ್ಯಾಂಪಿನ ರಸ್ತೆಯಿಂದ ನರಸಯ್ಯನ ಹೊಲದವರೆಗೆ ನಾಲಾ ಹೂಳು ಎತ್ತುವ ಕಾಮಗಾರಿ ವೀಕ್ಷಣೆ ಮಾಡಿ, ಕಾಮಗಾರಿ ಕಡತಗಳ ಪರಿಶೀಲನೆ, ಕಾಮಗಾರಿ ಗುಣ ಮಟ್ಟ ಪರಿಶೀಲನೆ ಮಾಡಿದರು.

ಸದರಿ ಸಂದರ್ಭದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಖಾಲೀದ್ ಅಹಮದ್, ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಅಸ್ರಾ ಜಬೀನಾ ಖಾನ್ ಮತ್ತು ಅಕ್ತರ ಪಾಷ, ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು, ಟಿಎಮ್ಎಸ್ ಸಂಯೋಜಕರು, ಸಾಮಾಜಿಕ ಲೆಕ್ಕ ಪರಿಶೋಧನ ಸಂಯೋಜ–ಕರು ಹಾಗೂ ಗ್ರಾ.ಪಂ ಸಿಬ್ಬಂದಿಗಳು ಹಾಜರಿದ್ದರು.

## ರಾಯಚೂರು ಜಿಲ್ಲೆಯಲ್ಲಿ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರ ಪ್ರವಾಸ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷರಾದ ಪಿ ರಘು ಅವರು ಫೆ.19ರಂದು ರಾಯಚೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಫೆ.19ರ ಬೆಳಗ್ಗೆ 7 ಗಂಟೆಗೆ ರಾಯಚೂರಿನಿಂದ ನಿರ್ಗಮಿಸಿ 8 ಗಂಟೆಗೆ ಮಂತ್ರಾಲಯಕ್ಕೆ ತೆರಳಿ ಶ್ರೀ ರಾಘವೇಂದ್ರ ಮಠಕ್ಕೆ ಭೇಟಿ ನೀಡುವರು. ಬಳಿಕ 10 ಗಂಟೆಗೆ ರಾಯಚೂರು ನಗರಕ್ಕೆ ಆಗಮಿಸಿ 10.30ಕ್ಕೆ ರಿಮ್ಸ್ ಆಸ್ಪತ್ರೆಗೆ ಭೇಟಿ ನೀಡುವರು.** ಕಾರ್ಮಿಕರ ಕುಂದುಕೊರತೆಗಳನ್ನು ಆಲಿಸುವರು.



ಬೆಳಗ್ಗೆ 11 ಗಂಟೆಗೆ ಮಹಾನಗರ ಪಾಲಿಕೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಪೌರ ಕಾರ್ಮಿಕರು ಮತ್ತು ಇತರೆ ಸಂಸ್ಥೆಗಳ ಸ್ವಚ್ಛತಾ ಕಾರ್ಮಿಕರೊಂದಿಗೆ ನೇರ ಸಂವಾದ ಕಾರ್ಯಕ್ರಮ ನಡೆಸುವರು. ಮಧ್ಯಾಹ್ನ 12.30ಕ್ಕೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಮತ್ತು ಇತರೆ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು, ಪೌರ ಕಾರ್ಮಿಕರಿಗೆ ಸಂಬಂಧಿಸಿದಂತೆ ಅಧಿಕಾರಿಗಳೊಡನೆ ಪ್ರಗತಿ ಪರಿಶೀಲನೆ ನಡೆಸುವರು. ಬಳಿಕ ರಾಯಚೂರಲ್ಲಿ ವಾಸ್ತವ್ಯ ಮಾಡುವರು. ಫೆ.20ರಂದು ಕೇಂದ್ರ ಸ್ಥಾನ ಬೆಂಗಳೂ–ರಿಗೆ ಪ್ರಯಾಣ ಬೆಳೆಸುವರು ಎಂದು ಪ್ರಕಟಣೆ ತಿಳಿಸಿದೆ.

# ಶೀಘ್ರ ರೈಲು ಸಂಚಾರ ಆರಂಭಿಸಲು ಯತ್ನಾಳಗೆ ಮನವಿ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಪಂಚಮಸಾಲಿ ಮುಖಂಡರಾದ ಅಮರೇಶ್ ತಾವರಗೇರಾ ರವರ ಮನೆಗೆ ಖಾಸಗಿ ಕಾರ್ಯಕ್ರಮ ಕ್ಕೆ ಆಗಮಿಸಿದ್ದ ಕೇಂದ್ರದ ರಾಜ್ಯ ರೈಲ್ವೆ ಖಾತೆ ಮಾಜಿ ಸಚಿವ, ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರಿಗೆ ಉತ್ತರ ಕರ್ನಾಟಕ ರೈಲ್ವೆ ಹೋರಾಟ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾ–ರಿಗಳಿಂದ ನೂತನ ಬಳ್ಳಾರಿ ಲಿಂಗಸಗೂರು. ಹಾಗೂ ರಾಯಚೂರು ಬೆಳಗಾವಿ ರೈಲು ಮಾರ್ಗಗಳ ಚಾಲನೆ ನೀಡಬೇಕೆಂದು ಮನವಿ ಸಲ್ಲಿಸಿದರು.**

ಉತ್ತರ ಕರ್ನಾಟಕ ಭಾಗದ ಬಳ್ಳಾರಿ ಲಿಂಗಸಗೂರ ನೂತನ ಮಾರ್ಗ ಸರ್ವೆಗೆ ಬಹು ದಿನಗಳ ಕನಸಾಗಿದ್ದ ಈ ಸರ್ವೆ ಕಾರ್ಯ ಈ ಹಿಂದೆ ಅಕ್ಟೋಬರ್ 2018 ಸರ್ವೆ ಕಾರ್ಯ ಪೂರ್ಣಗೊಳಿಸಿ ದಿನಾಂಕ 4–1–2019 ರಂದು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಈ ರೈಲ್ವೆ ಮಾರ್ಗ ಸಿರುಗುಪ್ಪ, ಸಿಂಧನೂರ್ ಸೇರಿದಂತೆ ಪ್ರಮುಖ ಪಟ್ಟಣಗಳನ್ನು



ಹಾದು ಲಿಂಗಸಗೂರು ನಗರಕ್ಕೆ ಈಗಾಗಲೇ ಗದಗ ವಾಡಿ ರೈಲು ಮಾರ್ಗಕ್ಕೆ ನೀಲ ನಕ್ಷೆ ಕೂಡ ವರದಿ ಸಲ್ಲಿಕೆಯಾಗಿದ್ದು, ಇದರ ಮಾರ್ಗಕ್ಕೆ ಲಿಂಕ್ ಮಾಡುವಂತೆ ಬಳ್ಳಾರಿ ಲಿಂಗಸಗೂರ ಮಾರ್ಗ 132. 18 ಕಿ.ಮೀ, ಮತ್ತು ರಾಯಚೂರು ಯಿಂದ ಬೆಳಗಾವಿ, ರೈಲು ಮಾರ್ಗ ಇದರ ವಾಯ ಲಿಂಗಸಗೂರು, ಬಾಗಲಕೋಟ, ಸೇರಿದಂತೆ ಪ್ರಮುಖ ಪಟ್ಟಣಗಳಲ್ಲಿ ತಲಪುವಂತೆ ಇದರ ಉದ್ದ ಮಾರ್ಗ 344. 95ಕೀ,ಮೀ, ಉದ್ದದ ಇದರ ಸಂಪೂರ್ಣ ವರದಿ ಅಕ್ಟೋಬರ್ 2011 ರಲ್ಲಿ ಪ್ರಾರಂಭಗೊಂಡು ದಿನಾಂಕ 1–3 2012 ಸರ್ಕಾರಕ್ಕೆ ಸರ್ವೆ ಕಾರ್ಯದ ವರದಿ ಕೂಡ ಸಲ್ಲಿಕೆಯಾಗಿದ್ದು, ಈ ಎರಡು ಯೋಜನೆಗಳ ವರದಿಯಂತೆ ಮಾರ್ಗ ಸಂಚಾರಕ್ಕೆ ನಿರೀಕ್ಷಿತ ರೈಲ್ವೆ ಸಂಚಾರದ ಪ್ರಯಾಣಿಕರಿಗೆ ರೈಲು ಸಂಚಾರದ ವ್ಯವಸ್ಥೆ ಕಲ್ಪಿಸುವಲ್ಲಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ಏರಬೇಕೆಂದು ಮಾಜಿ ರೈಲ್ವೆ ಸಚಿವರಾದ ಯತ್ನಾಳ್ ಅವರಿಗೆ ಮನವಿ ಸಲ್ಲಿಸಿದರು,.

ಈ ಸಂದರ್ಭದಲ್ಲಿ ಉತ್ತರ ಕರ್ನಾಟಕ ರೈಲ್ವೆ ಹೋರಾಟ ಸಮಿತಿಯ ಅಧ್ಯಕ್ಷರಾದ ನಾಗರಾಜ್ ಗಸ್ತಿ ವಕೀಲರು, ಉಪಾಧ್ಯಕ್ಷರಾದ ಕುಪ್ಪಣ್ಣ ಮಾಣಿಕ್ ವಕೀಲರು, ಲಿಂಗಸಗೂರು ರೈತ ಸಂಘದ ಅಧ್ಯಕ್ಷ ಸಂಗನಗೌಡ ಹೊಸೂರು, ಮುಖಂಡ ಶಂಕರಗೌಡ ಅಮರಾವತಿ, ಅಮರೇಶ್ ತಾವರಗೇರ, ಶಿವಾನಂದ ಬಾದವಾಡಗಿ,ಸಿ ಸಿ ಕರಡಕಲ್ ವಕೀಲರು, ನಾಗಪ್ಪ ಬೋರಾವತ್, ಶರಣಪ್ಪ ಸುಂಕದ ಕರಡಕಲ್,ಶಿವುಕುಮಾರ್ ಶೀಲಾವಂತರ ವಕೀಲರು, ಮಲ್ಲಿಕಾರ್ಜುನ್ ನಾಡಗೌಡ್ರು, ಡಾ. ಸುಭಾಷ್ ಪಲ್ಲಿದ್, ರುದ್ರಗೌಡ ಬಿರಾದರ್ ಫೋಟೋಗ್ರಾಫಿ, ವೀರೇಶ್ ಯರಡೋಣಿ, ರಾಮ್ ಕುಮಾರ್ ಅಲಬನೂರ್, ಭಾಗವಹಿಸಿದ್ದರು.

## ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ



ನೈಜ್ಯ ದೆಸೆ ನ್ಯೂಸ್

**ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರು ಸೈನಿಕರಂತೆ ಮುನ್ನುಗ್ಗಿದರೆ ಸಂಘದ ಚಟುವಟಿ–ಕೆಗಳು ಯಶಸ್ವಿಯಾಗುತ್ತವೆ' ಎಂದು ರಾಜ್ಯ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ನೂತನ ಜಿಲ್ಲಾಧ್ಯಕ್ಷ ಮಕ್ತುಮ್ ಕಾಮ್ದಾರ್ ಹೇಳಿದರು.**

ನಗರದ ಪ್ರವಾಸಿ ಮಂದಿರದಲ್ಲಿ ಶನಿವಾರ ರಾಜ್ಯ ಸರ್ಕಾರಿ ಮುಸ್ಲಿಂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ಸದಸ್ಯರು ಕಾರ್ಯಪ್ರವೃತ್ತರಾದರೆ ಕೇವಲ ಆರು ತಿಂಗಳಿಂದ ಒಂದು ವರ್ಷದೊಳಗೆ ರಾಜ್ಯ ಸಂಘವನ್ನು ಮೀ–ರಿಸುವಂತಹ ರೀತಿಯಲ್ಲಿ ಕ್ರಿಯಾಶೀಲತೆಯಿಂದ ಕೆಲಸ ಮಾಡಲು ಸಾಧ್ಯ' ಎಂದರು.

ಸಂಘದ ಜಿಲ್ಲಾ ಉಪಾಧ್ಯಕ್ಷೆ ವಾಹಿದಾ ತಾಜ್ ಮಾತನಾಡಿ 'ಸಂಘಟನೆಯಿಂದ ದೂರವಿರುವ ಸದಸ್ಯರನ್ನು ಒಟ್ಟುಗೂಡಿಸಿ ಸಂಘದ ಚಟುವಟಿ–ಕೆಗಳನ್ನು ನಡೆಸಬೇಕಿದೆ. ಸಮಾಜದಲ್ಲಿ ಶಿಕ್ಷಣದ ಮಹತ್ವ ಕುರಿತು ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ. ಎಸ್ಎಸ್ಎಲ್‌ಸಿ, ಪಿಯುಸಿ ಹಾಗೂ ಪದವಿಗಳಲ್ಲಿ ಉತ್ತಮ ಅಂಕಗಳನ್ನು ಪಡೆಯುವ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಗುವುದು' ಎಂದು ತಿಳಿಸಿದರು.

ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್, ಮಾಜಿ ಅಧ್ಯಕ್ಷ ಹುಸೇನ್ ಸಾಬ್ ಕಾಯಿಗಡ್ಡಿ, ಜಿಲ್ಲಾ ಕಾರ್ಯಾಧ್ಯಕ್ಷ ನಫೀಸ್ ಖಾನ್ ಪಠಾನ್, ಪ್ರಧಾನ ಕಾರ್ಯದರ್ಶಿ ಫರೀದ್ ಅಲಿ, ಖಜಾಂಚಿ ರಿಯಾಜ್ ಲಷ್ಕರೆ, ಜೂನಿಯರ್ ಎಂಜಿನಿಯರ್ ಖ್ವಾಜಾ ಹುಸೇನ್, ತಾಲ್ಲೂಕು ಅಧ್ಯಕ್ಷ ರಫೀಕ್ ಅಹ್ಮದ್ ಹೊಂಬಳ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.


ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಮಕ್ಕಳ ಬಾಲ್ಯದಲ್ಲಿ ಮಾರಕವಾಗುವ 12 ಮಾರಕ ರೋಗಗಳ ವಿರುದ್ಧದ ಮಗುವಿನ ಒಂದು ವರ್ಷ ವಯಸ್ಸಿನೊಳಗೆ ಎಲ್ಲಾ ಲಸಿಕೆಗಳನ್ನು ಉಚಿತವಾಗಿ ಹಾಕಿಸಲು ಲಸಿಕಾ ಅಧಿವೇಶನಗಳು ಸೂಕ್ತ.

ನೈಜ್ಯ ದೆಸೆ ನ್ಯೂಸ್

**ರಾಯಚೂರ: ಮಕ್ಕಳ ಸುಂದರ ಬಾಲ್ಯಕ್ಕೆ ಮಾರಣಾಂತಿ–ಕವಾಗುವ ಬಾಲ್ಯದಲ್ಲಿ ಕಂಡುಬರುವ ಮಾರಕ ಕಾಯಿಲೆಗಳ ನಿಯಂತ್ರಣಕ್ಕೆ ವಯಸ್ಸಿಗನುಸಾರವಾಗಿ ಹಾಕುವ ಲಸಿಕೆಗಳನ್ನು, ಪಾಲಕರು ಹಬ್ಬ, ಹ–ರಿದಿನಗಳು, ಜಾತ್ರೆಗಳು, ಮನೆಯಲ್ಲಿನ ಕೆಲಸಗಳ ಕಾರಣದಿಂದ ಮಗುವಿಗೆ ಹಾಕುವ ಲಸಿಕೆಗಳನ್ನು ಮುಂದುಡದೆ ವಯಸ್ಸಿಗನುಸಾರವಾಗಿ ಹಾಕಿಸಲು ಮರೆಯಬಾರದು ಎಂದು ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ತಾಯಂದಿರಿಗೆ ವಿನಂತಿಸಿದರು.**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ ರಾಯಚೂರು, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಎಲ್‌ಬಿಎಸ್ ನಗರ ಆಶ್ರಯದಲ್ಲಿ ಚಂದ್ರಬಂಡಾ ರಸ್ತೆಯ ಆಶ್ರಯ ಕಾಲೋನಿಯಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಮಕ್ಕಳಿಗೆ



12 ಮಾರಕ ರೋಗಗಳ ವಿರುದ್ಧ ಹಾಗೂ ಗರ್ಭಿಣಿ ತಾಯಂದಿರಿಗೆ ಟಿಡಿ ಚುಚ್ಚುಮದ್ದು ಹಾಕುವ ಸಾರ್ವಜನಿಕ ಲಸಿಕಾ ಅಧಿವೇಶನದಲ್ಲಿ ಭಾಗವಹಿಸಿದ ತಾಯಂದಿರಿಗೆ ಜಾಗೃತಿ ನೀಡಿ ಮಾತನಾಡುತ್ತಾ ವೈಯಕ್ತಿಕ ಕಾರಣಗಳು ಏನೆ ಇರಲಿ ಮಗುವಿಗೆ ಬಾಲಕ್ಷಯ, ಪೋಲಿಯೋ, ಕಾಮಾಲೆ, ನಾಯಿಕೆಮ್ಮು, ಗಂಟಲುಮಾರಿ, ಧನುರ್ವಾಯು, ನ್ಯೂಮೋನಿಯಾ, ನ್ಯೂಮೊಕಾಕಲ್, ರೋಟಾವೈರಸ್ ಅತಿಸಾರ ಭೇದಿ, ದಡಾರ, ರೂಬೆಲ್ಲಾ, ಮೆದುಳುಜ್ವರ, ಇರುಳುಗಣ್ಣು, ತಡೆಗೆ ಲಸಿಕೆ ಹಾಕುವುದನ್ನು ಮುಂದುಡಬಾರದು.

ಒಂದು ವೇಳೆ ಪರ ಊರಿಗೆ ಹೋಗಿದ್ದರೂ ಸಹ ಹತ್ತಿರದ ಸರಕಾರಿ ಆಸ್ಪತ್ರೆಗಳಲ್ಲಿ ಲಸಿಕೆಗಳನ್ನು ಉಚಿತವಾಗಿ ಮಕ್ಕಳಿಗೆ ಹಾಕಲಾಗುವುದು, ಈ ವೇಳೆ ತಾಯಿಕಾರ್ಡ್ ಮರೆಯಬಾರದು ಎಂದು ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ ಮಾಹಿತಿ ನೀಡುತ್ತಾ, ಗಂಡಾಂತರ ಗರ್ಭಿಣಿಯರು ಎಂದು ಗುರ್ತಿಸಿದ ನಂತರ ಅವರ ನಿರಂತರ ನಿಗಾವಣೆ, ಒಂದು ವೇಳೆ ರಕ್ತದೊತ್ತಡ ಪರೀಕ್ಷೆ ಕೈಗೊಂಡ ನಂತರ ಕಂಡು ಬರುವ ವ್ಯತ್ಯಾಸವನ್ನು ನಗರ ವ್ಯಾಪ್ತಿಯಲ್ಲಿ ನಮ್ಮ ಕ್ಲಿನಿಕ್‌ಗಳಲ್ಲಿ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರಿಶೀಲಿಸಿ ರಕ್ತಹೀನತೆ ಕಂಡುಬಂದಲ್ಲಿ ಸ್ಥಳೀಯವಾಗಿ ನೀಡುವ ಚಿಕಿತ್ಸೆಯಿಂದ (ಐಎಫ್‌ಎ ಮಾತ್ರೆ, ಐರನ್ ಸುಕ್ರೋಸ್, ರಕ್ತ ಹಾಕಿಸುವಿಕೆ ) ಸುಧಾರಣೆ ಮಾಡಲು ಅವಕಾಶವಿದೆ.


ರಕ್ತದಲ್ಲಿ ಕಬ್ಬಿಣಾಂಶ ಪ್ರಮಾಣ ಕಡಿಮೆಯಾಗದಂತೆ ನಿರ್ವಹಿಸಲು ಇಲಾಖೆಯಿಂದ ಉಚಿತವಾಗಿ ಕೊಡಲ್ಪಡುವ ಕಬ್ಬಿಣಾಂಶ ಮಾತ್ರೆಗಳನ್ನು ವೈದ್ಯರ ಸಲಹೆಯಂತೆ ಸೇವಿಸಲು ಹಾಗೂ ಹಸಿರು ತರಕಾರಿ, ಕಾಯಿಪಲ್ಯಗಳನ್ನು ದೈನಂದಿನವಾಗಿ ಸೇವಿಸಲು ಆಧ್ಯತೆ ನಿಡಲು ವಿನಂತಿಸಿದರು. ಮೊದಲ ಹೆರಿಗೆ ನಂತರ ಎರಡನೇಯ ಮಗುವಿಗೆ ಕನಿಷ್ಟ 3 ವರ್ಷಗಳ ಅಂತರ ಕಾಪಾಡುವುದು ತಾಯಿ ಮಗುವಿನ ಆರೋಗ್ಯದ ದೃಷ್ಟಿಯಿಂದ ಮುಖ್ಯವಾಗಿದ್ದು, ಇದಕ್ಕಾಗಿ ಅಂತರ ಚುಚ್ಚುಮದ್ದು, ಕಾಪರ–ಟಿ, ನೀರೊಧ ಮುಂತಾದವುಗಳನ್ನು ಬಳಸಲು ವಿನಂತಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಪವಿತ್ರಾ, ಆಶಾ ಕಾರ್ಯಕರ್ತೆ ಎಸ್ತಾರಮ್ಮ, ಅಂಗನವಾಡಿ ಕಾರ್ಯಕರ್ತೆ ಶಂಶಾದ್ ಬೇಗಂ, ಯುನಾಟೈಡ್ ವೆ ಸಂಸ್ಥೆಯ ಈರಮ್ಮ, ತಾಯಂದಿರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

# MVSc

MVSc (Master of Veterinary Science) ಎಂಬುದು ಪಶುವೈದ್ಯಕೀಯ ವಿಜ್ಞಾನದಲ್ಲಿ 2 ವರ್ಷಗಳ (4 ಸೆಮಿಸ್ಟರ್‌ಗಳು) ಸ್ನಾತಕೋತ್ತರ ಪದವಿಯಾಗಿದೆ. ಪಶುವೈದ್ಯಕೀಯ ಜಾನುವಾರು ಉತ್ಪನ್ನಗಳ ತಂತ್ರಜ್ಞಾನದಲ್ಲಿ ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (MV.Sc), ಪ್ರಾಣಿಗಳ ಸಂತಾನೋತ್ಪತ್ತಿಯ ವಿಶೇಷತೆಯಡಿಯಲ್ಲಿ, ಮಾಂಸ, ಹಾಲು ಮತ್ತು ಮೊಟ್ಟೆಗಳಂತಹ ಪ್ರಾಣಿ ಆಧಾರಿತ ಉತ್ಪನ್ನಗಳ ಸಂಸ್ಕರಣೆ, ಸಂರಕ್ಷಣೆ ಮತ್ತು ಗುಣಮಟ್ಟ ನಿಯಂತ್ರಣದ ಮೇಲೆ ಕೇಂದ್ರೀಕರಿಸುವ ಸ್ನಾತಕೋತ್ತರ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮವು ಸಾಮಾನ್ಯವಾಗಿ ಸಂಸ್ಥೆಯ ಮಾರ್ಗಸೂಚಿಗಳನ್ನು ಅವಲಂಬಿಸಿ 2 ವರ್ಷಗಳವರೆಗೆ ಇರುತ್ತದೆ. ಪಠ್ಯಕ್ರಮವು ಪ್ರಾಣಿ ಉತ್ಪನ್ನ ಸಂಸ್ಕರಣಾ ತಂತ್ರಗಳು, ಆಹಾರ ಸುರಕ್ಷತೆ, ಗುಣಮಟ್ಟದ ಭರವಸೆ, ಜಾನುವಾರು ಉತ್ಪನ್ನ ಸಂರಕ್ಷಣೆ ಮತ್ತು ನೈರ್ಮಲ್ಯ ಮಾನದಂಡಗಳಂತಹ ವಿಷಯಗಳನ್ನು ಒಳಗೊಂಡಿದೆ. ಈ ಕೋರ್ಸ್ ಪ್ರಾಣಿಗಳ ಆರೋಗ್ಯ, ಚಿಕಿತ್ಸೆ, ತಳಿಶಾಸ್ತ್ರ ಮತ್ತು ಪೋಷಣೆಯ ಕುರಿತು ತಜ್ಞತೆಯನ್ನು ನೀಡುತ್ತದೆ. ಅರ್ಹತೆಯು BVSc & AH ಪದವಿಯಲ್ಲಿ ಕನಿಷ್ಠ 50–55% ಅಂಕಗಳನ್ನು ಹೊಂದಿರಬೇಕು. ಇದು ಪ್ರಾಣಿ ಪ್ರಿಯರಿಗೆ ಮತ್ತು ಪಶುವೈದ್ಯಕೀಯ ಕ್ಷೇತ್ರದಲ್ಲಿ ವೃತ್ತಿಜೀವನ ನಿರ್ಮಿಸಲು ಉತ್ತಮ ಅವಕಾಶ. News18Kannada News18 Kannada +2 MVSc ಕೋರ್ಸ್ ವಿವರಗಳು: ಕೋರ್ಸ್ ಹೆಸರು: ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ (MVSc) ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು) ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ BVSc & AH (Bachelor of Veterinary Science & Animal Husbandry) ಪದವಿ. ಅಂಕಗಳು: ಪದವಿಯಲ್ಲಿ ಕನಿಷ್ಠ 50% ರಿಂದ 55% ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಪ್ರವೇಶ ಪ್ರಕ್ರಿಯೆ: ಪ್ರವೇಶ ಪರೀಕÉë (Entrance Exam) ಅಥವಾ ಮೆರಿಟ್ ಆಧಾರಿತ. ವಿಶೇಷತೆಗಳು (Specializations): ಪ್ರಾಣಿ ತಳಿಶಾಸ್ತ್ರ (Animal Genetics), ಪಶುವೈದ್ಯಕೀಯ ಸೂಕ್ಷ್ಮಜೀವಿ ವಿಜ್ಞಾನ (Veterinary Microbiology), ಶಸ್ತ್ರಚಿಕಿತ್ಸೆ (Surgery), ಪೋಷಣೆ (Nutrition), ಮತ್ತು ಜಾನುವಾರು ಉತ್ಪಾದನಾ ತಂತ್ರಜ್ಞಾನ. ಉದ್ಯೋಗಾವಕಾಶಗಳು: ಪಶುವೈದ್ಯರು, ಸಂಶೋಧಕರು, ಪ್ರಾಣಿ ಸಾಕಾಣಿಕೆ ತಜ್ಞರು, ಸರ್ಕಾರಿ ಪಶುಸಂಗೋಪನಾ ಇಲಾಖೆಗಳು, ಮತ್ತು ಖಾಸಗಿ ಪಶುವೈದ್ಯಕೀಯ ಆಸ್ಪತ್ರೆಗಳು.

# ಫೆ.22ರಂದು ವಿಶ್ವಾರಾಧ್ಯರ ಜಾತ್ರಾ ಮಹೋತ್ಸವ



ನೈಜ್ಯ ದೆಸೆ ನ್ಯೂಸ್

**ಅನುಗ್ರಹ ಕ್ಷೇತ್ರ ಅಬ್ಬೆ ತುಮಕೂರಿನ ವಿಶ್ವಾರಾಧ್ಯರ ಜಾತ್ರಾ ಮಹೋತ್ಸವ ಫೆಬ್ರುವರಿ 11ರಿಂದ ಆರಂಭವಾಗಿದ್ದು, ಫೆ.22ರ ಸಂಜೆ 6.15ಕ್ಕೆ ವಿಶ್ವಾರಾಧ್ಯರ ರಥೋತ್ಸವ ಸಂಭ್ರಮದಿಂದ ಜರುಗಲಿದೆ' ಎಂದು ಮಠದ ಪೀಠಾಧಿಪತಿ ಗಂಗಾಧರ ಶಿವಾಚಾರ್ಯರು ತಿಳಿಸಿದರು. ಮಠದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಾತಿ–ಮತಗಳನ್ನು ಮೀರಿನಿಂತ ಮಹಾಂತರ ಜಾತ್ರೆ ಕಾರ್ಯಕ್ರಮಗಳು ಸಂಭ್ರಮದಿಂದ ನಡೆಯುತ್ತಿವೆ. ಫೆ.22ರ ಬೆಳಿಗ್ಗೆ 10ಕ್ಕೆ ರಥೋತ್ಸವ ಮಹಾಪೂಜೆ, ರಥಾಂಗ ಹೋಮ ಜರುಗಲಿದೆ' ಎಂದರು.**

'ರಥೋತ್ಸವದ ಬಳಿಕ ರಾತ್ರಿ 8ಕ್ಕೆ ಮಾನವ ಧರ್ಮ ಸಮಾವೇಶ ನಡೆಯಲಿದ್ದು, ಕೊಪ್ಪಳ ಗವಿ ಸಿದ್ದೇಶ್ವರ ಮಠದ ಅಭಿನವ ಗವಿ ಸಿದ್ದೇಶ್ವರ ಸ್ವಾಮೀಜಿ ಪಾವನ ಸಾನ್ನಿಧ್ಯ ವಹಿಸುವರು. ಬೆಂಗಳೂರಿನ ಮಹಾಂತಲಿಂಗ ಶಿವಾಚಾರ್ಯರು, ಮಠಾಧೀಶರ ಒಕ್ಕೂಟದ ಅಧ್ಯಕ್ಷ ಶಿವಮೂರ್ತಿ ಶಿವಾಚಾರ್ಯರು, ಸೊನ್ನ ಮಠದ ಶಿವಾನಂದ ಸ್ವಾಮೀಜಿ, ಶಹಾಪುರದ ಸೂಗೂರೇಶ್ವರ ಶಿವಾಚಾರ್ಯರು, ಹೆಡಗಿಮದ್ರಾದ ಶಾಂತಮಲ್ಲಿಕಾರ್ಜುನ ಪಂಡಿತಾರಾಧ್ಯ ಶಿವಾಚಾರ್ಯರು, ಕುಕನೂರಿನ ಚನ್ನಮಲ್ಲ ಶಿವಾಚಾರ್ಯರು ಸೇರಿದಂತೆ ಹಲವು ಮಠಾಧೀಶರ ಸಾನ್ನಿಧ್ಯ ಇರಲಿದೆ' ಎಂದು ಹೇಳಿದರು.

'ಸಚಿವರಾದ ಎಚ್.ಕೆ. ಪಾಟೀಲ ಮತ್ತು ರಾಮಲಿಂಗಾರೆಡ್ಡಿ ಅವರು ಸಮಾವೇಶದ ಜ್ಯೋತಿ ಬೆಳಗಿಸುವರು. ಸಚಿವರಾದ ಶರಣಬಸಪ್ಪ ದರ್ಶನಾಪುರ, ಡಾ.ಶರಣಪ್ರಕಾಶ ಪಾಟೀಲ, ಈಶ್ವರ ಖಂಡ್ರೆ ಹಾಗೂ ಎನ್.ಎಸ್. ಭೋಸರಾಜು ಗ್ರಂಥ ಬಿಡುಗಡೆ ಮಾಡುವರು' ಎಂದರು. 'ಮುಖ್ಯ ಅತಿಥಿಗಳಾಗಿ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯ್‌ಸಿಂಗ್, ಶಾಸಕರಾದ ಚನ್ನಾರೆಡ್ಡಿ ಪಾಟೀಲ ತುನ್ನೂರು, ಶರಣಗೌಡ ಕಂದಕೂರ, ರಾಜಾ ವೇಣುಗೋಪಾಲ ನಾಯಕ, ಬಸವರಾಜ ಮತ್ತಿಮಡು, ಅಲ್ಲಮಪ್ರಭು ಪಾಟೀಲ, ಬಿ.ಜಿ. ಪಾಟೀಲ, ಶಶೀಲ್ ಜಿ.ನಮೋಶಿ, ಮಹಾರಾಷ್ಟ್ರದ ಮಾಜಿ ಸಚಿವರಾದ ಸಿದ್ದರಾಮ ಮೇತ್ರೆ, ರಾಜೂಗೌಡ, ಮಾಜಿ ಶಾಸಕರಾದ ಸೌಮ್ಯರೆಡ್ಡಿ, ದೊಡ್ಡಪ್ಪಗೌಡ ಪಾಟೀಲ ನರಿಬೋಳ, ಮುಖಂಡರಾದ ರಾಚನಗೌಡ ಮುದ್ನಾಳ, ಮಹೇಶರೆಡ್ಡಿ ಮುದ್ನಾಳ, ಹಣಮೇಗೌಡ ಬೀರನಕಲ್ ಸೇರಿದಂತೆ ಹಲವರು ಪಾಲ್ಗೊಳ್ಳುವರು. ರಸಮಂಜರಿ, ಸೇವಾರ್ಥಿಗಳಿಗೆ ಪುರಸ್ಕಾರವೂ ನಡೆಯಲಿದೆ' ಎಂದು ಮಾಹಿತಿ ನೀಡಿದರು.

'ಫೆ.23ರ ಸಂಜೆ 7ಕ್ಕೆ ನಡೆಯುವ ಸಾಂಸ್ಕೃತಿಕ ಸೌರಭ ಕಾರ್ಯಕ್ರಮದಲ್ಲಿ 'ಶೆಟ್ಟಿಯ ಹಾರಾಟ ಸಂಗವ್ವನ ಚೆಲ್ಲಾಟ' ನಾಟಕಕ್ಕೆ ಎಡಿಸಿ ರಮೇಶ ಕೋಲಾರ ಅವರು ಚಾಲನೆ ನೀಡುವರು. ಫೆ.24ರ ಬೆಳಿಗ್ಗೆ 10ಕ್ಕೆ ನಡೆಯುವ ಶರಣ ಸಂಸ್ಕೃತಿ ಶಿಬಿರವನ್ನು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಮರುಳಸಿದ್ದಾರಾಧ್ಯ ಎಚ್.ಜೆ. ಅವರು ಉದ್ಘಾಟಿಸುವರು. ಸಂಜೆ 7ಕ್ಕೆ 'ಅಪ್ಪ ನೀಚ ಮಗ ಅರೆಹುಚ್ಚ' ನಾಟಕವನ್ನು ಡಿವೈಎಸ್‌ಪಿ ಸುರೇಶ ಎಂ. ಅವರು ಉದ್ಘಾಟಿಸುವರು' ಎಂದು ಮಾಹಿತಿ ನೀಡಿದರು.

'ಫೆ.25ರ ಸಂಜೆ 7ಕ್ಕೆ 'ಭೂಮಿ ತೂಕದ ಹೆಣ್ಣು' ನಾಟಕವನ್ನು ಡಿಎಚ್‌ಒ ಡಾ.ಮಹೇಶ ಬಿರಾದಾರ ಉದ್ಘಾಟನೆ ಮಾಡುವರು. ಫೆ.26ರ ಸಂಜೆ ಕಳಸ ಅವರೋಹಣದೊಂದಿಗೆ ಜಾತ್ರಾ ಮಹೋತ್ಸವ ಸಂಪನ್ನಗೊಳ್ಳಲಿದೆ' ಎಂದರು. ಪತ್ರಿಕಾಗೋಷ್ಠಿಯಲ್ಲಿ ಮಠದ ಕಿರಿಯ ಸ್ವಾಮೀಜಿ ಶಿವಶೇಖರ ಶಿವಾಚಾರ್ಯರು, ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು, ಪ್ರಮುಖರಾದ ವಿಶ್ವನಾಥರೆಡ್ಡಿ ಮಾಲಿ ಪಾಟೀಲ, ಮಠದ ವಕ್ತಾರ ಸುಭಾಷ್ಚಂದ್ರ ಕೌಲಗಿ, ನರಸಣ್ಣಗೌಡ ರಾಯಚೂರು ಉಪಸ್ಥಿತರಿದ್ದರು. ಭಕ್ತರ ದಂಡು; ಸಿದ್ಧತೆ ಜೋರು ಕ್ಷೇತ್ರದಲ್ಲಿ ಜಾತ್ರೆ ಹಾಗೂ ರಥೋತ್ಸವದ ಸಿದ್ಧತೆಗಳು ಭರದಿಂದ ಸಾಗಿವೆ. ರಥವನ್ನು ತೊಳೆದು ಅಣಿಗೊಳಿಸಲಾಗುತ್ತಿದೆ. ಗ್ರಾಮದಲ್ಲಿ ಮಿಠಾಯಿ ಹೋಟೆಲ್ ಆಟಿಕೆ ಸಾಮಗ್ರಿ ಮಳಿಗೆಗಳನ್ನು ಹಾಕುವಲ್ಲಿ ವರ್ತಕರು ನಿರತವಾಗಿದ್ದಾರೆ. ಮಾಘ ಅಮಾವಾಸ್ಯೆ ಹಿನ್ನೆಲೆಯಲ್ಲಿ ಮಂಗಳವಾರ ಭಕ್ತರು ಕುಟುಂಬ ಸಮೇತರಾಗಿ ಬಂದು ವಿಶ್ವಾರಾಧ್ಯ ಭಗಳಾಂಬದೇವಿ ದರ್ಶನ ಮಾಡಿ ಗಂಗಾಧರ ಶಿವಾಚಾರ್ಯರ ಆಶೀರ್ವಾದ ಪಡೆದರು.

# ಆರೋಗ್ಯ ಸಂಪತ್ತು ಇಲ್ಲದಿದ್ದರೆ ಎಷ್ಟು ಗಳಿಸಿದರೂ ಉಪಯೋಗವಿಲ್ಲ :ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ



ನೈಜ್ಯ ದೆಸೆ ನ್ಯೂಸ್

**ಆರೋಗ್ಯ ಸಂಪತ್ತು ಇಲ್ಲದಿದ್ದರೆ ನೀವು ಎಷ್ಟು ಗಳಿಸಿದರೂ ಉಪಯೋಗವಿಲ್ಲ. ಸಂಪತ್ತು ಗಳಿಕೆಗೆ ಆದ್ಯತೆ ನೀಡದೆ ಆರೋಗ್ಯದ ಕಡೆ ಗಮನ ನೀಡಿ ಎಂದು ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೇಳಿದರು. ಕಡಲಬಾಳು ಗ್ರಾಮದ ಶಾಖಾ ಗವಿಮಠದ ಪೀಠಾಧಿಪತಿ ಮರಿಶಾಂತವೀರ ಸ್ವಾಮೀಜಿ ಪುರಪ್ರವೇಶ ಹಾಗೂ ಧರ್ಮಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.**

ಸಂಪತ್ತು ಗಳಿಸಿದ ಬಳಿಕ ಅದನ್ನು ಅನುಭವಿಸಲು ಆರೋಗ್ಯವೇ ಇಲ್ಲ ಎಂದ ಮೇಲೆ ಉಪಯೋಗವಿಲ್ಲ ಎಂದರು. ಪರಿಸರ ನಮಗೆ ಎಲ್ಲ ಕೊಟ್ಟಿದ್ದು, ಪರಿಸರಕ್ಕೆ ನಮ್ಮ ಕೊಡುಗೆ ಏನು ಎಂಬುದನ್ನು ಪ್ರಶ್ನಿಸಿಕೊಳ್ಳಬೇಕು. ಶಾಖಾ ಗವಿಮಠದ ಪೀಠಾಧಿಪತಿ ಮರಿಶಾಂತವೀರ ಸ್ವಾಮೀಜಿ ಈಗ ನಿಮ್ಮ ಗ್ರಾಮದ ಪುತ್ರನಿದ್ದಂತೆ. ಅವರ ಸೇವೆ ಗ್ರಾಮಕ್ಕೆ ಅಗತ್ಯವಾಗಿದ್ದು, ಭಕ್ತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಶಾಸಕ ಕೆ.ನೇಮಿರಾಜ್ ನಾಯ್ಕ ಧರ್ಮಸಭೆ ಉದ್ಘಾಟಿಸಿ, ಕೊಪ್ಪಳದ ಗವಿಮಠದ ಮಹಾಸ್ವಾಮಿಗಳ ಆಗಮನ ಮತ್ತು ಮರಿಸ್ವಾಮೀಜಿಯವರ ಪಟ್ಟಾಧಿಕಾರ ನಿಮ್ಮ ಗ್ರಾಮವನ್ನು ಪಾವನಗೊಳಿಸಿದೆ.

ಇತ್ತೀಚೆಗೆ ನಡೆದ ಕೊಪ್ಪಳ ಜಾತ್ರೆ ಎರಡನೇ ಕುಂಭಮೇಳದಂತೆ ಕಂಡುಬಂದಿತು. ಮುಂದೊಂದುದಿನ ಕಡಲಬಾಳು ಅಂತಹ ತಾಣವಾಗಲಿ, ಧಾರ್ಮಿಕ ಕ್ಷೇತ್ರ ಬೆಳೆಯಲಿ, ಅಕ್ಷರ, ಅನ್ನದಾಸೋಹ ನಡೆಯಲಿ ಎಂದರು. ಶಾಖಾ ಮಠದ ಮರಿ ಶಾಂತವೀರ ಸ್ವಾಮೀಜಿ ಮಾತನಾಡಿ, ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಗೆ ಬದುಕುವ ಅವಕಾಶ ಇದೆ. ಪ್ರತಿಯೊಂದು ಜೀವಿಯೂ ಋಣಭಾರ ತೀರಿಸುವ ತವಕದಲ್ಲಿದ್ದರೆ. ಮನುಷ್ಯ ಮಾತ್ರ ಬರುವಾಗ ಋಣವನ್ನು ಹೊತ್ತುತರುತ್ತಾನೆ, ಋಣ ಭಾರ ಹೊತ್ತುಕೊಂಡು ಬದುಕುತ್ತಾನೆ. ಹೋಗುವಾಗ ಸಮಾಜದ ಋಣ ತೀರಿಸುವುದನ್ನೇ ಮರೆತು ಬಿಡುತ್ತಾನೆ. ವೈಯಕ್ತಿಕವಾಗಿ ನನ್ನ ಮೇಲೆ ಋಣ ಭಾರವಿದೆ.

ಋಣ ತೀರಿಸಲು ಕೊಟ್ಟಿರುವ ಜವಾಬ್ದಾರಿ ನಿಭಾಯಿಸಲು ಶ್ರಮಿಸುವೆ ಎಂದರು. ನೀಲಗುಂದ ಮಠದ ಚನ್ನಬಸವ ಶಿವಯೋಗಿ, ಹೆಬ್ಬಾಳು ನಾಗಭೂಷಣ ಶಿವಾಚಾರ್ಯ, ಸೊನ್ನದ ಶಿವಾನಂದ ಸ್ವಾಮೀಜಿ, ಬಾಚಿಗೊಂಡನಹಳ್ಳಿಯ ಶಿವಮಹಾಂತ ಸ್ವಾಮೀಜಿ ಮಾತನಾಡಿದರು. ನಂದಿಪುರದ ಡಾ.ಮಹೇಶ್ವರ ಸ್ವಾಮೀಜಿ, ಹಾಲಸ್ವಾಮಿ ಮಠದ ಹಾಲಸಿದ್ದೇಶ್ವರ ಸ್ವಾಮೀಜಿ, ಜೆಡಿಎಸ್ ಜಿಲ್ಲಾಧ್ಯಕ್ಷ ಬದಾಮಿ ಮೃತ್ಯುಂಜಯ, ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಪುರಸಭೆ ಸದಸ್ಯರಾದ ಜನ್ನು ನಾಗರಾಜ, ಬಿ.ಗಂಗಣ್ಣ, ನವೀನ್ ಕುಮಾರ್, ಪ್ರಮುಖರಾದ ಕನ್ನಿಹಳ್ಳಿ ಚಂದ್ರಶೇಖರ್, ಕೃಷ್ಣಮೂರ್ತಿ ಶೆಟ್ರು, ಐಟಿ ಕೊಟ್ರೇಶ್, ಗವಿಸಿದ್ದಪ್ಪ, ಬ್ಯಾಟಿ ನಾಗರಾಜ, ಶಿವಕುಮಾರ ಭಟ್ರು ಇದ್ದರು.

## ಗಣೇಕಲ್ ಜಲಾಶಯದ ಕಾಲುವೆಗಳ ಸುತ್ತ ನಿಷೇಧಾಜ್ಞೆ ಜಾರಿ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಗಣೇಕಲ್ ಜಲಾಯಶದಿಂದ ರಾಂಪೂರ ಕುಡಿಯುವ ನೀರಿನ ಜಲಾಶಯಕ್ಕೆ ನೀರನ್ನು ಹರಿಸುವ ವಿತರಣಾ ಕಾಲುವೆ 95, 96, 98, 98ಎ, 98ಬಿ, 99ಎ, 99 ಮತ್ತು 100ರವರೆಗೆ ಕಾಲುವೆಯ ಸುತ್ತಲಿನ ಪ್ರದೇಶದ ವ್ಯಾಪ್ತಿಯಲ್ಲಿ ಶಾಂತಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಯಾವುದೇ ಅಹಿತಕರ ಘಟನೆಗಳು ಜರುಗದಂತೆ .**

ಫೆ.17ರಿಂದ ಮಧ್ಯರಾತ್ರಿ 12 ಗಂಟೆಯಿಂದ ಫೆ.21ರ ಮಧ್ಯೆರಾತ್ರಿ 12 ಗಂಟೆವರೆಗೆ 100 ಮೀಟರಗಳ ವಿತರಣಾ ಕಾಲುವೆಗಳ ಸುತ್ತುವರೆದ ಪ್ರದೇಶದ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬೈಕ್ ಸವಾರನ ನಿಯಂತ್ರಣ ತಪ್ಪಿ ಲಾರಿ ಚಕ್ರಕ್ಕೆ ಸಿಲುಕಿ ದುರಂತ ಅಂತ್ಯ





ನೈಜ್ಯ ದೆಸೆ ನ್ಯೂಸ್

**ಓವರ್ಟೇಕ್ ವೇಳೆ ಲಾರಿ ಚಕ್ರಕ್ಕೆ ಸಿಲುಕಿ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಯಲಬುರ್ಗಾ ತಾಲೂಕಿನ ಉಪಲದಿನ್ನಿ ಬಳಿ ನಡೆದಿದೆ.ಬೈಕ್ ಸವಾರನ ನಿಯಂತ್ರಣ ತಪ್ಪಿ ಲಾರಿ ಚಕ್ರಕ್ಕೆ ಸಿಲುಕಿದ ಪರಿಣಾಮ ಶ್ರೀನಿವಾಸ್ (26) ಮತ್ತು ಸಿದ್ದನಗೌಡ (25) ಮೃತಪಟ್ಟಿದ್ದಾರೆ. ಸೊಸೆಯ ಬರ್ತ್ಡೇ ಕಾರ್ಯಕ್ರಮಕ್ಕೆ ತೆರಳುತ್ತಿದ್ದ ಇಬ್ಬರು ದುರಂತ ಅಂತ್ಯ ಕಂಡಿದ್ದಾರೆ. ಬೇವೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.**

ನಡೆದಿದ್ದೇನು? ಸೊಸೆಯ ಬರ್ತ್ಡೇ ಹಿನ್ನೆಲೆ ಸ್ನೇಹಿತ ಸಿದ್ದನಗೌಡ ಜೊತೆ ಶ್ರೀನಿವಾಸ್ ತೆರಳುತ್ತಿದ್ದರು. ಮುಸಲಾಪುರದಿಂದ ಹಿರೇಅರಳಹಳ್ಳಿಗೆ ಬೈಕ್‌ನಲ್ಲಿ ಇಬ್ಬರು ಹೋಗುತ್ತಿದ್ದ ವೇಳೆ ಮುಂದೆ ಸಾಗುತ್ತಿದ್ದ ಸ್ಟೀಲ್ ಕ್ವಾಯಿಲ್ ಸಾಗಿಸುತ್ತಿದ್ದ ಲಾರಿಯನ್ನು ಓವರ್ಟೇಕ್ ಮಾಡುವ ಭರದಲ್ಲಿ ಬೈಕ್ ನಿಯಂತ್ರಣ ತಪ್ಪಿದೆ. ಪರಿಣಾಮ ಇಬ್ಬರೂ ಲಾರಿ ಕೆಳಗೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲೂಕಿನ ಮುಸಲಾಪುರ ನಿವಾಸಿಗಳು ಎನ್ನಲಾಗಿದೆ.

ಖಾಸಗಿ ಶಾಲಾ ಬಸ್ ಹರಿದು 4 ವರ್ಷದ ಮಗು ಸ್ಥಳದಲ್ಲೇ ಸಾವು

ಖಾಸಗಿ ಶಾಲಾ ಬಸ್ ಹರಿದು 4 ವರ್ಷದ ಮಗು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲೂಕಿನ ಗಾಜರಕೋಟ ಗ್ರಾಮದಲ್ಲಿ ನಿನ್ನೆ ನಡೆದಿದೆ.

ಗಾಜರಕೋಟ ಗ್ರಾಮದ ವಿಸ್ಡಮ್ ಶಾಲೆಯ ಪುನೀತ್ ಮೃತ ವಿದ್ಯಾರ್ಥಿ. ನಿನ್ನೆ ಶಾಲೆಯಿಂದ ಬಸ್‌ನಲ್ಲಿ ಮನೆಗೆ ಬರುತ್ತಿದ್ದ ಪುನೀತ್ ಬಸ್‌ನಿಂದ ಕೆಳಗೆ ಇಳಿಯುತ್ತಿದ್ದಂತೆ ಚಾಲಕ ರಿವರ್ಸ್ ತೆಗೆದುಕೊಂಡಿದ್ದಾನೆ. ಈ ವೇಳೆ ಬಸ್ ಚಕ್ರಕ್ಕೆ ಸಿಲುಕಿ ಮಗು ಮೃತಪಟ್ಟಿದೆ. ಪುನೀತ್ ಕುಟುಂಬ ಸದಸ್ಯರ ಆಕ್ರಂದನ ಮುಗಿಲು ಮುಟ್ಟಿದ್ದು, ಮಗುವಿನ ಶವವಿಟ್ಟು ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಬಸ್ ಚಾಲಕನಿಗೆ ಜೀವಾವಧಿ ಶಿಕ್ಷೆ ನೀಡುವಂತೆ ಗ್ರಾಮಸ್ಥರು ಆಗ್ರಹಿಸಿದರು. ಪೊಲೀಸರ ಮನವೊಲಿಕೆ ಬಳಿಕ ಪ್ರತಿಭಟನೆ ಕೈಬಿಟ್ಟಿದ್ದಾರೆ. ಗುರುಮಠಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಹುಟ್ಟುಹಬ್ಬದ ದಿನದಂದೇ ಅಪಘಾತದಲ್ಲಿ ಯುವಕ ದುರ್ಮರಣ

ಹುಟ್ಟುಹಬ್ಬದ ದಿನದಂದೇ ಅಪಘಾತದಲ್ಲಿ ಯುವಕ ದುರ್ಮರಣ ಹೊಂದಿರುವ ಘಟನೆ ಬೆಂಗಳೂರು ಉತ್ತರ ತಾಲೂಕಿನ ಐವರಕಂಡಪುರ ಗ್ರಾಮದಲ್ಲಿ ನಡೆದಿದೆ. ತೋಟದ ಗುಡ್ಡದಹಳ್ಳಿ ನಿವಾಸಿ ಪವನ್ (24) ಮೃತ ಯುವಕ. ನಿನ್ನೆ ಸಂಜೆ 5:45ಕ್ಕೆ ಹುಟ್ಟುಹಬ್ಬದ ಸಂಭ್ರಮ ಮುಗಿಸಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಗೂಡ್ಸ್ ವಾಹನ ಮತ್ತು ಬೈಕ್ ನಡುವೆ ಡಿಕ್ಕಿ ಸಂಭವಿಸಿ ಪವನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಸೋಲದೇವನಹಳ್ಳಿ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಫೆ. 20ರಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಕಾರ್ಯಾಗಾರ–ಉತ್ಸವ



ನೈಜ್ಯ ದೆಸೆ ನ್ಯೂಸ್

**ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಹಾಗೂ ಜನಪ್ರಿಯ ಪಂಚ ಗ್ಯಾರಂಟಿ ಯೋಜನೆಗಳ ಯಶಸ್ಸು ಸಾರಲು ಫೆ. 20ರಂದು ನಗರದಲ್ಲಿ ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಕಾರ್ಯಾಗಾರ–ಉತ್ಸವವನ್ನು ಅಚ್ಚುಕಟ್ಟಾಗಿ ನಡೆಸಲು ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಹಾಗೂ ಜಿಪಂ ಸಿಇಒ ಶಶಿಧರ ಕುರೇರ ಸಂಬಂಧಿಸಿದ ಅಧಿಕಾರಿಗಳಿಗೆ ಜಂಟಿ ಸೂಚನೆ ನೀಡಿದರು.**

ನಗರದ ಜಿಲ್ಲಾ ಪಂಚಾಯಿತಿ ನೂತನ ಸಭಾಭವನದಲ್ಲಿ ಮಂಗಳವಾರ ಜರುಗಿದ ಪಂಚ ಗ್ಯಾರಂಟಿ ಯೋಜನೆಯ ಕಾರ್ಯಾಗಾರ–ಉತ್ಸವ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು. ಫೆ. 20ರಂದು ನವನಗರದ ಜಿಲ್ಲಾ ಕಲಾಭವನದಲ್ಲಿ ಗ್ಯಾರಂಟಿ ಯೋಜನೆಗಳ ಉತ್ಸವ ನಡೆಯಲಿದ್ದು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸುವ ದೃಷ್ಟಿಯಿಂದ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗೆ ವಹಿಸಿಕೊಟ್ಟ ಕಾರ್ಯಗಳನ್ನು ಜವಾಬ್ದಾರಿಯಿಂದ ನಿರ್ವಹಿಸುವಂತೆ ತಿಳಿಸಿದರು. ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ಸಾರಲು ಹಾಗೂ ಅರ್ಹ ಲಾನುಭವಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಈ ಉತ್ಸವ ಹಮ್ಮಿಕೊಳ್ಳಲಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಉದ್ಘಾಟಿಸಲಿದ್ದು, ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ಹೇಳಿದರು. 3 ಸಾವಿರಕ್ಕೂ ಹೆಚ್ಚು ಯೋಜನೆಗಳ ಲಾನುಭವಿಗಳು ಆಗಮಿಸುತ್ತಿದ್ದು, ಅವರಿಗೆ ಅನುಕೂಲವಾಗುವ ರೀತಿಯಲ್ಲಿ ಬಸ್‌ಗಳ ವ್ಯವಸ್ಥೆ ಮಾಡುವಂತೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಜಿಲ್ಲಾ ಸಂಚಾರಿ ಅಧಿಕಾರಿಗಳಿಗೆ ತಿಳಿಸಿದರು. ಕಲಾಭವನದ ಆವರಣದಲ್ಲಿ ಗ್ಯಾರಂಟಿ ಯೋಜನೆಗಳ ಮಾಹಿತಿ ಸೇರಿ ವಿವಿಧ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಹಾಕುವ ವ್ಯವಸ್ಥೆ ಆಗಬೇಕು ಎಂದರು. ಜಿಲ್ಲೆಯ ಗ್ಯಾರಂಟಿ ಯೋಜನೆಯ ಸದುಪಯೋಗ ಪಡೆದುಕೊಂಡ ಲಾನುಭವಿಗಳನ್ನು ಪಟ್ಟಿ ನೀಡಿದಲ್ಲಿ ಅವರಿಗೆ ಅನಿಸಿಕೆಗಳನ್ನು ವ್ಯಕ್ತಪಡಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಅನೀಲಕುಮಾರ ದಡ್ಡಿ ಮಾತನಾಡಿ, ಜಿಲ್ಲೆಯ ಎಲ್ಲ ತಾಲೂಕು ಮಟ್ಟದ ಅನುಷ್ಠಾನ ಪ್ರಾಧಿಕಾರದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಲಾನುಭವಿಗಳ ಕರೆತರುವ ಕೆಲಸ ಮಾಡಬೇಕು. ಉತ್ಸವದಲ್ಲಿ ವಿವಿಧ ಕಲಾತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ಕ್ರಮಕೈಗೊಳ್ಳಲು ಸಭೆಗೆ ತಿಳಿಸಿದರು. ಜಿಪಂ ಉಪ ಕಾರ್ಯದರ್ಶಿ ಎನ್.ವೈ.ಬಸರಿಗಿಡದ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಜಯಶ್ರೀ ತಿಮ್ಮಾಪೂರ, ರಫೀಕ್ ಇಸ್ಮಾಯಿಲ್‌ಸಾಬ್ ಬೈರಕದಾರ್, ಶಿವಪ್ಪ ಕೋನೇರಿ, ರವೀಂದ್ರ ಯಡಹಳ್ಳಿ, ಜಿಪಂ ಯೋಜನಾ ನಿರ್ದೇಶಕ ಎಸ್.ಎಂ.ಕಾಂಬಳೆ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಸೇರಿದಂತೆ ತಾಲೂಕಾ ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಯೋಜನೆ ಅನುಷ್ಠಾನ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.